Form No. 9 (Civil)
Title sheet for
Judgment in suits
(R.P. 91)

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
ನಾಗಮಂಗಲ

ಉಪಸ್ಥಿತರು ಃ ಶ್ರೀಮತಿ. ಅನುಪಮ.ಡಿ. ಬಿ.ಕಾಂ.ಎಲ್.ಎಲ್.ಬಿ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂಡಾಧಿಕಾರಿಗಳು, ನಾಗಮಂಗಲ
ದಿನಾಂಕ ೨೦ನೇ ಡಿಸೆಂಬರ್ ೨೦೧೪

ಅಸಲುದಾವಾ ನಂ. ೧೭ / ೨೦೦೭

ವಾದಿ : ಕಂಬೇಗೌಡ ಬಿನ್ ಲೇಟ್ ವೆಂಕಟೇಗೌಡ
೫೦ ವರ್ಷ ,
ವಾಸ ಃ ಅಂಕನಹಳ್ಳಿ ಗ್ರಾಮ,
ಬೆಳ್ಳೂರು ಹೋಬಳಿ , ನಾಗಮಂಗಲ ತಾಲ್ಲೂಕು .

(ವಾದಿಯ ಪರವಾಗಿ ಶ್ರೀ.ಹೆಚ್.ವಿ.ಟಿ. ವಕೀಲರು)

ವಿರುದ್ಧ

ಪ್ರತಿವಾದಿಗಳು : ೧. ವೆಂಕಟೇಗೌಡ ಬಿನ್ ಲೇಟ್ ವೆಂಕಟೇಗೌಡ,
೪೮ ವರ್ಷ ,
ವಾಸಃ ಅಂಕನಹಳ್ಳಿ ಗ್ರಾಮ , ಬೆಳ್ಳೂರು ಹೋಬಳಿ ,
ನಾಗಮಂಗಲ ತಾಲ್ಲೂಕು .

೨. ಶ್ರೀಮತಿ ತಿರುಮಲಮ್ಮ ಕೋಂ ಗಿರೀಗೌಡ ,
೬೫ ವರ್ಷ ,
ವಾಸಃ ಜಾಲಡಿಗೆರೆ ಗ್ರಾಮ ,
ಯಡಿಯೂರು ಪೋಸ್ಟ್ ,
ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆ .

೩. ವೆಂಕಟರಾಮೇಗೌಡ
ಬಿನ್ ಲೇಟ್ ವೆಂಕಟೇಗೌಡ ( ಹೊನ್ನಪಯನ)
40 ವರ್ಷ ,
ವಾಸಃ ಕಾಡ ಅಂಕನಹಳ್ಳಿ ಗ್ರಾಮ ,
ದೊಡ್ಡಜಟಕಾ ಪೋಸ್ಟ್ , ಬೆಳ್ಳೂರು ಹೋಬಳಿ ,
ನಾಗಮಂಗಲ ತಾಲ್ಲೂಕು .

೪. ಗಜಮಿಕಿ ವೆಂಕಟರಾಮು ಬಿನ್ ಗಜಮೇಸ್ತ್ರಿ,
42 ವರ್ಷ ,
ವಾಸಃ ಕಾಡ ಅಂಕನಹಳ್ಳಿ ಗ್ರಾಮ ,
ದೊಡ್ಡಜಟಕಾ ಪೋಸ್ಟ್ , ಬೆಳ್ಳೂರು ಹೋಬಳಿ ,
ನಾಗಮಂಗಲ ತಾಲ್ಲೂಕು .

೫. ತಮ್ಮಣ್ಣಗೌಡ ಬಿನ್ ಲೇಟ್ ವೆಂಕಟೇಗೌಡ ,
54 ವರ್ಷ ,
ವಾಸಃ ನಾಗತಿಹಳ್ಳಿ ಗ್ರಾಮ , ಚುಂಚನಹಳ್ಳಿ ಪೋಸ್ಟ್ ,
ನಾಗಮಂಗಲ ತಾಲ್ಲೂಕು .

೬. ಜಯಣ್ಣ ಬಿನ್ ಲೇಟ್ ವೆಂಕಟೇಗೌಡ ,
49 ವರ್ಷ ,

೭. ಗೋವಿಂದ ಬಿನ್ ಲೇಟ್ ವೆಂಕಟೇಗೌಡ ,
52 ವರ್ಷ ,

೮. ಚಂದ್ರಶೇಖರ ಬಿನ್ ಲೇಟ್ ವೆಂಕಟೇಗೌಡ ,
47 ವರ್ಷ ,
5 ರಿಂದ 8ನೇ ಪ್ರತಿವಾದಿಗಳ ವಾಸಃ ನಂ. 75
2ನೇ ಮೈನ್ , 12ನೇ ಕ್ರಾಸ್ , ಶ್ರೀನಿವಾಸನಗರ ,
ಬೆಂಗಳೂರು .

( ೧ನೇ ಪ್ರತಿವಾದಿಯ ಪರವಾಗಿ ಶ್ರೀ ಎಂ.ಡಿ. ವಕೀಲರು , ೩ ರಿಂದ ೪ನೇ ಪ್ರತಿವಾದಿಗಳ ಪರವಾಗಿ ಶ್ರೀ ಕೆ.ಎಂ.ಪಿ. ವಕೀಲರು , ೨ನೇ ಪ್ರತಿವಾದಿ ಏಕಪಕ್ಷೀಯ , ೫ ರಿಂದ ೮ನೇ ಪ್ರತಿವಾದಿಗಳ ಪರವಾಗಿ ಶ್ರೀ ಎಂ.ದರ್ಪಣ್, ವಕೀಲರು )

| | | |
|---|---|---|
| ದಾವೆ ದಾಖಲು ಮಾಡಿದ ದಿನಾಂಕ | ಃ | ೦೩.೦೨..೨೦೦೭ |
| ದಾವೆಯ ವಿವರ | ಃ | ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ |
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ | ೨೯.೦೫.೨೦೦೯ |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | ಃ | ೦೪.೦೪.೨೦೧೪ |

ತೀರ್ಪನ್ನು ಘೋಷಿಸಿದ ದಿನಾಂಕ : ೨೦.೧೨.೨೦೧೪

ದಾವೆ ತೆಗೆದುಕೊಂಡ ಕಾಲಾವಧಿ : ವರ್ಷ ತಿಂಗಳು ದಿವಸ

೦೭ ೧೦ ೧೬

ಸಿವಿಲ್ ನ್ಯಾಯಾಧೀಶರು
ನಾಗಮಂಗಲ

## ತೀರ್ಪು

ವಾದಿಯು ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಸಲ್ಲಿಸಿದ್ದು , ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ತನಗೆ ಬರಬೇಕಾದ ೧ / ೪ ಭಾಗಾಂಶವನ್ನು ನೀಡಬೇಕೆಂದು, ದಿನಾಂಕ ೬.೧೧.೧೯೯೧ ರಂದು ೧ನೇ ಪ್ರತಿವಾದಿಯು ೩ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ೧೧ ನೇ ಸ್ವತ್ತನ್ನು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುವುದು ಹಾಗೂ ದಿನಾಂಕ ೧೮.೮.೧೯೯೪ ರಂದು ೧ನೇ ಪ್ರತಿವಾದಿಯು , ೪ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ೯ನೇ ಸ್ವತ್ತನ್ನು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುವುದು ವಾದಿಯನ್ನು ಬದ್ಧಗೊಳಿಸುವುದಿಲ್ಲವೆಂದು ಘೋಷಿಸಬೇಕೆಂದು , ಹಾಗೂ ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ದಾವೆ ಸಲ್ಲಿಸಿದ ದಿನಾಂಕದಿಂದ ವಾದಿಗೆ ಸಲ್ಲಬೇಕಾದ ೧ / ೪ ಭಾಗಾಂಶವು ಸಲ್ಲುವವರೆಗೆ ಷೆಡ್ಯೂಲ್ ಸ್ವತ್ತುಗಳ ಮೇಲೆ ಮಧ್ಯಕಾಲಿನ ಲಾಭಾಂಶವನ್ನು ನೀಡಬೇಕೆಂದು ಹಾಗೂ ನ್ಯಾಯಾಲಯಕ್ಕೆ ಸಮಯೋಚಿತವೆಂದು ಕಂಡು ಬರುವ ಇತರೇ ಪರಿಹಾರಗಳನ್ನು ನೀಡಬೇಕೆಂದು ಕೋರಿದ್ದಾರೆ .

೨. ವಾದಪತ್ರದ ಸಂಕ್ಷಿಪ್ತ ವಿವರ :

ವಾದಿ, ೧ ಹಾಗೂ ೨ ನೇ ಪ್ರತಿವಾದಿಗಳು ಸಹೋದರ - ಸಹೋದರಿಯರಾಗಿದ್ದು , ೫ ರಿಂದ ೮ನೇ ಪ್ರತಿವಾದಿಗಳು ವಾದಿಯ ಸಹೋದರಿ ಮಾಯಮ್ಮನವರ ಮಕ್ಕಳಾಗಿದ್ದು , ೩ ಮತ್ತು ೪ನೇ ಪ್ರತಿವಾದಿಗಳು ದಾವಾ ಸ್ವತ್ತುಗಳಲ್ಲಿ ೧೧ ಮತ್ತು ೯ನೇ ಸ್ವತ್ತುಗಳನ್ನು ಖರೀದಿಸಿದ ಖರೀದಿದಾರರಾಗಿರುತ್ತಾರೆ.

೩. ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತುಗಳಾಗಿವೆ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಎಲ್ಲಾ ಪಂಚಾಯ್ತಿ ದಾಖಲೆಗಳು ವಾದಿಯ ತಂದೆಯ ಹೆಸರಿನಲ್ಲಿವೆ . ವಾದಿ ಮತ್ತು ೧ , ೨ , ೫ ರಿಂದ ೮ನೇ ಪ್ರತಿವಾದಿಗಳು ದಾವಾ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನದಲ್ಲಿದ್ದಾರೆ ಮತ್ತು ಜಂಟಿಯಾಗಿ ಅವುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ . ವಾದಿ ಮತ್ತು ೧ , ೨ , ೫ ರಿಂದ ೮ನೇ ಪ್ರತಿವಾದಿಗಳು ಒಟ್ಟು ಕುಟುಂಬದ ಸಹೋದರ ಸಹೋದರಿಯರಾಗಿರುವ ಕಾರಣ ಅವರುಗಳಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಸಮಾನವಾದ ಭಾಗಾಂಶದ ಹಕ್ಕುಗಳು ಇರುತ್ತವೆ . ೧ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ಪ್ರತ್ಯೇಕ ಹಕ್ಕುಗಳು ಇರುವುದಿಲ್ಲ . ಅವರು ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಪ್ರತ್ಯೇಕವಾಗಿ ಅನುಭವಿಸುತ್ತಿದ್ದರು , ಅದರಲ್ಲಿ ವಾದಿಗೆ ಸೇರಬೇಕಾದ ನಿಹಿತ ಭಾಗಾಂಶದ ಹಕ್ಕನ್ನು ನೀಡುತ್ತಿಲ್ಲ , ಅಲ್ಲದೆ ವಾದಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಭಾಗಾಂಶವನ್ನು ನೀಡದೆ ೩ ಮತ್ತು ೪ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ೧೧ ಮತ್ತು ೧೯ನೇ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ . ಸದರಿ ಸ್ವತ್ತುಗಳನ್ನು ಮಾರಾಟ ಮಾಡುವ ಯಾವುದೇ ಆರ್ಥಿಕ ತೊಂದರೆ ವಾದಿ ಮತ್ತು ೧ , ೨ , ೫ ರಿಂದ ೮ನೇ ಪ್ರತಿವಾದಿಗಳಿಗೆ ಇರುವುದಿಲ್ಲ . ೧ನೇ ಪ್ರತಿವಾದಿ ತನ್ನ ಸ್ವಂತ ಉದ್ದೇಶದಿಂದ ಸದರಿ ಸ್ವತ್ತನ್ನು ೩ ಮತ್ತು ೪ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದಾರೆ . ಆದುದರಿಂದ ಸದರಿ ಕ್ರಯಪತ್ರಗಳು ವಾದಿಯನ್ನು ಯಾವುದೇ ರೀತಿಯಲ್ಲಿ ಬದ್ಧಗೊಳಿಸುವುದಿಲ್ಲ . ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಗೆ ೧ / ೪ ಭಾಗಾಂಶದ ಹಕ್ಕನ್ನು ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೊಡಿಸಿಕೊಡಬೇಕೆಂದು ಹಾಗೂ ದಾವಾ ಷೆಡ್ಯೂಲ್ ೧೧ ಹಾಗೂ ೧೯ನೇ ಸ್ವತ್ತುಗಳ ಬಾಬ್ತು ೧ನೇ ಪ್ರತಿವಾದಿ ಮಾರಾಟ ಮಾಡಿರುವ ನೋಂದಾಯಿತ ಕ್ರಯಪತ್ರಗಳು ಯಾವುದೇ ರೀತಿಯಲ್ಲಿ ವಾದಿಯನ್ನು ಬದ್ಧಗೊಳಿಸುವುದಿಲ್ಲವೆಂದು ಆದೇಶಿಸಿ , ದಾವೆಯ ದಿನಾಂಕದಿಂದ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಗೆ ೧ / ೪ ಭಾಗಾಂಶವನ್ನು ನೀಡಿ ಪ್ರತ್ಯೇಕ ಸ್ವಾಧೀನ ನೀಡುವವರೆಗಿನ ಮಧ್ಯಕಾಲಿನ ಲಾಭಾಂಶಗಳನ್ನು ನೀಡಬೇಕೆಂದು ಹಾಗೂ ನ್ಯಾಯಾಲಯಕ್ಕೆ ಸಮಯೋಚಿತವೆಂದು ಕಂಡು ಬರುವ ಇತರೇ ಪರಿಹಾರಗಳನ್ನು ನೀಡಬೇಕೆಂದು ಕೋರಿದ್ದಾರೆ .

೪. ವಾದಿಯು ಸಲ್ಲಿಸಿರುವ ದಾವೆಯ ಬಾಬ್ತು ಪ್ರತಿವಾದಿಗಳಿಗೆ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಉತ್ತರ ನೀಡುವಂತೆ ಕಳುಹಿಸಿದ ಸಮನ್ಸ್‌ನ್ನು ಪಡೆದ ೧ನೇ ಪ್ರತಿವಾದಿ ನ್ಯಾಯಾಲಯಕ್ಕೆ ಹಾಜರಾಗಿದ್ದು ೧ನೇ ಪ್ರತಿವಾದಿಯ ಪರವಾಗಿ ಶ್ರೀ ಎಂ.ಡಿ. ವಕೀಲರು ವಕಾಲತ್ತು ಹಾಗೂ ಪ್ರತಿವಾದಪತ್ರ ಸಲ್ಲಿಸಿದ್ದಾರೆ.

೨ನೇ ಪ್ರತಿವಾದಿ ಸಮನ್ಸ್ ಪಡೆದು ನ್ಯಾಯಾಲಯಕ್ಕೆ ಹಾಜರಾಗದಿರುವ ಕಾರಣ ಅವರನ್ನು ಏಕಪಕ್ಷೀಯವಾಗಿ ಪರಿಗಣಿಸಲಾಗಿದೆ. ೩ ಮತ್ತು ೪ನೇ ಪ್ರತಿವಾದಿಗಳ ಪರವಾಗಿ ಶ್ರೀ ಕೆಎಂಪಿ ವಕೀಲರು ವಕಾಲತ್ತು ಮತ್ತು ಪ್ರತಿವಾದಪತ್ರ ಸಲ್ಲಿಸಿದ್ದಾರೆ. ೫ ರಿಂದ ೮ನೇ ಪ್ರತಿವಾದಿಗಳ ಪರವಾಗಿ ಶ್ರೀ ಎಂ.ದರ್ಪಣ್, ವಕೀಲರು ಹಾಜರಾಗಿ ತಮ್ಮ ಪ್ರತಿವಾದಪತ್ರ ಸಲ್ಲಿಸಿದ್ದಾರೆ.

೫. <u>೧ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದಪತ್ರದ ಸಂಕ್ಷಿಪ್ತ ವಿವರ</u> ಃ

೧ನೇ ಪ್ರತಿವಾದಿಯು, ವಾದಿ ಮತ್ತು ತನ್ನ ಹಾಗೂ ೨, ೫ ರಿಂದ ೮ನೇ ಪ್ರತಿವಾದಿಗಳ ನಡುವಿನ ಸಂಬಂಧವನ್ನು ಒಪ್ಪಿದ್ದಾರೆ. ಉಳಿದಂತೆ ದಾವಾ ಷೆಡ್ಯೂಲ್ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂಬುದನ್ನು ಅಲ್ಲಗಳೆದಿದ್ದಾರೆ. ಮುಂದುವರೆದು , ದಿನಾಂಕ ೧೦.೦೩.೧೯೭೬ ರಂದು ವಾದಿ ಮತ್ತು ೧ನೇ ಪ್ರತಿವಾದಿ ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ . ಸದರಿ ವಿಭಾಗದಂತೆ ಸದರಿ ದಿನಾಂಕದಿಂದ ಒಟ್ಟು ಕುಟುಂಬ ಅಸ್ತಿತ್ವದಲ್ಲಿರುವುದಿಲ್ಲ . ವಿಭಾಗದಲ್ಲಿ ವಾದಿಯು ೮ ಐಟಂ ಸ್ವತ್ತುಗಳನ್ನು ಪಡೆದಿದ್ದು , ಅವು ದಾವಾ ಷೆಡ್ಯೂಲ್ ೨ ಮತ್ತು ೩ ಹಾಗೂ ೧೧ ರಿಂದ ೧೭ನೇ ಸ್ವತ್ತುಗಳಾಗಿವೆ . ಸದರಿ ಸ್ವತ್ತುಗಳಲ್ಲಿ ೧೧ ರಿಂದ ೧೭ನೇ ಸ್ವತ್ತುಗಳನ್ನು ವಾದಿಯು ದಿನಾಂಕ ೦೪.೦೧.೧೯೭೧ ರಂದು ೧ನೇ ಪ್ರತಿವಾದಿಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ . ದಿನಾಂಕ ೨೯.೧೨.೧೯೭೦ ರಂದು ಸದರಿ ಕ್ರಯಪತ್ರವನ್ನು ನೋಂದಣಿ ಸಹ ಮಾಡಿಸಲಾಗಿದೆ . ದಾವಾ ಷೆಡ್ಯೂಲ್ ೪ ರಿಂದ ೬, ೧೮ ಮತ್ತು ೧೯ನೇ ಸ್ವತ್ತುಗಳು ಸದರಿ ವಿಭಾಗದಲ್ಲಿ ೧ನೇ ಪ್ರತಿವಾದಿಯ ಭಾಗಾಂಶಕ್ಕೆ ಬಂದಿರುತ್ತದೆ . ೧ನೇ ಪ್ರತಿವಾದಿಯು ತನ್ನ ಪೋಷಕರ ಮತ್ತು ಸಹೋದರಿಯರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ೧ನೇ ಪ್ರತಿವಾದಿಯು ಸಹೋದರಿಯರ ವಿವಾಹಗಳನ್ನೂ ಸಹ ಮಾಡಿರುತ್ತಾರೆ . ಸದರಿ ವಿವಾಹಗಳನ್ನು ಮಾಡಲು ತನ್ನ ಸಹೋದರ ಮತ್ತು ಸಂಬಂಧಿಕರಿಂದ ಸಾಲವನ್ನು ಸಹ ಪಡೆದಿರುತ್ತಾರೆ . ಸದರಿ ಸಾಲವನ್ನು ತೀರಿಸುವ ಸಲುವಾಗಿ ದಾವಾ ಷೆಡ್ಯೂಲ್ 7ನೇ ಸ್ವತ್ತನ್ನು ೧ನೇ ಪ್ರತಿವಾದಿಯ ಭಾಗಾಂಶಕ್ಕೆ ನೀಡಲಾಗಿದ್ದು , ದಿನಾಂಕ ೦೨.೦೮.೧೯೭೪ ರಂದು ೫ನೇ ನಿವೇಶನ ಸಂಖ್ಯೆಯನ್ನು ಅಂದರೆ ದಾವಾ ೧೯ನೇ ಸ್ವತ್ತನ್ನು ೪ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ . ಸದರಿ ಸ್ವತ್ತು ವಿಭಾಗದಲ್ಲಿ ೧ನೇ ಪ್ರತಿವಾದಿಯ ಭಾಗಾಂಶಕ್ಕೆ ಬಂದಿದ್ದು ಆ ಮೂಲಕ ಅವರ ಸ್ವಯಾರ್ಜಿತ ಸ್ವತ್ತಾಗಿದ್ದು , ೧ನೇ ಪ್ರತಿವಾದಿ ದಾವಾ

ಷೆಡ್ಯೂಲ್ ೧೧ನೇ ಸ್ವತ್ತನ್ನು ೩ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ೪ ರಿಂದ ೮ , ೧೦ , ೧೨ ರಿಂದ ೧೮ನೇ ಸ್ವತ್ತುಗಳು ೧ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತುಗಳಾಗಿವೆ ಹಾಗೂ ಅವರು ಅದಕ್ಕೆ ಸಂಪೂರ್ಣ ಮಾಲೀಕರಾಗಿರುತ್ತಾರೆ ಮತ್ತು ಸಂಬಂಧಿಸಿದ ಇಲಾಖೆಗೆ ಪ್ರತಿವರ್ಷ ಕಂದಾಯ ಪಾವತಿ ಮಾಡುತ್ತಿದ್ದಾರೆ . ಸದರಿ ಸ್ವತ್ತುಗಳ ಮೇಲೆ ವಾದಿಗೆ ಯಾವುದೇ ನಿಹಿತ ಹಕ್ಕುಗಳು ಇರುವುದಿಲ್ಲ . ದಾವಾ ಷೆಡ್ಯೂಲ್ ೧ ಮತ್ತು ೯ನೇ ಸ್ವತ್ತುಗಳು ಅಸ್ತಿತ್ವದಲ್ಲಿ ಇರುವುದಿಲ್ಲ . ದಿನಾಂಕ ೧೦.೦೩.೧೯೬೯ ರಂದು ನಡೆದ ವಿಭಾಗದ ಪ್ರಕಾರ ದಾವಾ ಷೆಡ್ಯೂಲ್ ೨ ಮತ್ತು ೩ನೇ ಸ್ವತ್ತುಗಳಿಗೆ ವಾದಿಯು ಸ್ವಾಧೀನದಾರರಾಗಿರುತ್ತಾರೆ . ಸದರಿ ವಿಭಾಗದಲ್ಲಿ ದಾವಾ ಷೆಡ್ಯೂಲ್ ೧೯ನೇ ಸ್ವತ್ತನ್ನು ೧ನೇ ಪ್ರತಿವಾದಿಗೆ ನೀಡಲಾಗಿದ್ದು , ಸದರಿ ಸ್ವತ್ತನ್ನು ದಾವೆಯಲ್ಲಿ ವಾದಿಯು ಸೇರಿಸಿರುವುದಿಲ್ಲ . ಸದರಿ ಸ್ವತ್ತನ್ನು ವಾದಿಯು ಕುಂಟೇಗೌಡನ ಮಗ ಚೌಡೇಗೌಡ ಎಂಬುವವರಿಗೆ ೧ನೇ ಪ್ರತಿವಾದಿಯ ಹೆಸರಿನಲ್ಲಿ ಮಾರಾಟ ಮಾಡಿರುತ್ತಾರೆ. ಸದರಿ ವಿಚಾರವು ೧ನೇ ಪ್ರತಿವಾದಿಗೆ ದಿನಾಂಕ ೧೧.೦೨.೨೦೧೩ ರಂದು ತಿಳಿದಿರುತ್ತದೆ . ವಾದಿಯ ತಂದೆ – ತಾಯಿಗಳು ಮತ್ತು ಸಹೋದರಿಯರ ಯೋಗಕ್ಷೇಮವನ್ನು ೧ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು . ವಾದಿಯು ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿದ್ದು ಅವರು ತಮ್ಮ ತಂದೆ – ತಾಯಿಗಳ , ಸಹೋದರಿಯರ ಯೋಗಕ್ಷೇಮವನ್ನು ನೋಡಿಕೊಂಡಿರುವುದಿಲ್ಲ . ದಾವಾ ಷೆಡ್ಯೂಲ್ ೪ ರಿಂದ ೮ , ೧೦ ಹಾಗೂ ೧೨ ರಿಂದ ೧೮ನೇ ಸ್ವತ್ತುಗಳಿಗೆ ವಿಭಾಗ ಪತ್ರದ ಪ್ರಕಾರ ೧ನೇ ಪ್ರತಿವಾದಿಯೇ ಸಂಪೂರ್ಣ ಮಾಲೀಕರಾಗಿರುತ್ತಾರೆ . ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ೧೧ ಮತ್ತು ೧೯ನೇ ಸ್ವತ್ತುಗಳನ್ನು ಕುಟುಂಬದ ಆರ್ಥಿಕ ಅವಶ್ಯಕತೆಗಾಗಿ ೩ ಮತ್ತು ೪ನೇ ಪ್ರತಿವಾದಿಗಳಿಗೆ ೧ನೇ ಪ್ರತಿವಾದಿ ಮಾರಾಟ ಮಾಡಿದ್ದು , ಪ್ರಸ್ತುತ ೩ ಮತ್ತು ೪ನೇ ಪ್ರತಿವಾದಿಗಳು ಅವುಗಳ ಮಾಲೀಕರಾಗಿ ಸ್ವಾಧೀನ ಹೊಂದಿರುತ್ತಾರೆ. ವಾದಿಯು ಉದ್ದೇಶ ಪೂರ್ವಕವಾಗಿ ದಾವಾ ಷೆಡ್ಯೂಲ್ ೧೯ನೇ ಸ್ವತ್ತನ್ನು ಸೇರಿಸಿರುವುದಿಲ್ಲ. ಆದುದರಿಂದ ದಾವೆಯನ್ನು ವಜಾಗೊಳಿಸಬೇಕಾಗಿ ಕೋರಿದ್ದಾರೆ.

೬. ಪ್ರಥಮತಃ ವಾದಪತ್ರದಲ್ಲಿ ೧೮ ಷೆಡ್ಯೂಲ್ ಸ್ವತ್ತುಗಳನ್ನು ಸೇರಿಸಿದ್ದು ನಂತರದಲ್ಲಿ ತಿದ್ದುಪಡಿ ಮಾಡಿ ೧೯ನೇ ಸ್ವತ್ತನ್ನೂ ಸಹ ಸೇರಿಸಲಾಗಿದೆ.

೭. <u>೩ ಮತ್ತು ೪ನೇ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದಪತ್ರದ ಸಂಕ್ಷಿಪ್ತ ವಿವರ ಃ</u>

೩ ಮತ್ತು ೪ನೇ ಪ್ರತಿವಾದಿಗಳು ೧ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿನ ವಿವರಗಳನ್ನು ಸಂಕ್ಷಿಪ್ತವಾಗಿ ಪುನರಾವರ್ತಿಸಿದ್ದಾರೆ. ಮುಂದುವರೆದು ತಾವುಗಳು ದಾವಾ ಷೆಡ್ಯೂಲ್ ೧೧ ಮತ್ತು ೧೯ನೇ ಸ್ವತ್ತುಗಳನ್ನು ೧ನೇ ಪ್ರತಿವಾದಿಯ ಕುಟುಂಬದ ಆರ್ಥಿಕ ಅವಶ್ಯಕತೆಗಾಗಿ ಅವರು ಮಾರಾಟ ಮಾಡಲು ಬಯಸಿದ್ದರಿಂದ ಖರೀದಿಸಿದ್ದೇವೆ. ಸದರಿ ಸ್ವತ್ತುಗಳನ್ನು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿದ್ದು, ಅಂದಿನಿಂದಲೂ ತಾವುಗಳೇ ಅವುಗಳ ಪ್ರತ್ಯೇಕ ಮಾಲೀಕರಾಗಿ ಸ್ವಾಧೀನವನ್ನು ಹೊಂದಿರುತ್ತೇವೆ. ೧೯೯೧ನೇ ಸಾಲಿನಲ್ಲಿ ನೋಂದಾಯಿತ ಕ್ರಯಪತ್ರದ ಮೂಲಕ ದಾವಾ ಷೆಡ್ಯೂಲ್ ೧೧ ಮತ್ತು ೧೯ನೇ ಸ್ವತ್ತುಗಳನ್ನು ತಾವುಗಳು ಖರೀದಿ ಮಾಡಿರುವ ಕಾರಣ ವಾದಿಗೆ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ. ವಾದಿಯು ಪ್ರಸ್ತುತ ದಾವೆಯಲ್ಲಿ ಚೌಡೇಗೌಡ ಬಿನ್ ಕುಂಟೇಗೌಡ ಎಂಬುವವರನ್ನು ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ವಾದಿಯು ಅವರಿಗೆ ಸ್ವತ್ತಿನ ಸಂ.೫೯ ಖಾತಾ ಸಂ.೩೨ ರಲ್ಲಿ ಪೂರ್ವ - ಪಶ್ಚಿಮ ೨೦ ಅಡಿ , ಉತ್ತರ ದಕ್ಷಿಣ ೧೧ ಅಡಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ . ಆದುದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಬೇಕಿತ್ತು. ಅವರನ್ನು ಅವಶ್ಯಕ ಪಕ್ಷಕಾರರನ್ನಾಗಿ ಮಾಡದೇ ಇರುವ ಕಾರಣ ದಾವೆಯು ವಜಾಗೊಳ್ಳಲು ಅರ್ಹವಾಗಿರುತ್ತದೆ. ವಾದಿಯು ದಾವಾ ಷೆಡ್ಯೂಲ್ ಸ್ವತ್ತುಗಳ ಬಾಬ್ತು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿಯೇ ೩ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿದ್ದು , ದಾವಾ ಷೆಡ್ಯೂಲ್ ೧೧ ನೇ ಸ್ವತ್ತಿಗೆ ಅವರು ಮಾಲೀಕರು ಎಂಬುದನ್ನು ಸಾಬೀತುಗೊಳಿಸಿದೆ. ಈ ವಿಚಾರವು ತಿಳಿದಿದ್ದರೂ ಸಹ ವಾದಿಯು ಸತ್ಯಾಂಶವನ್ನು ಮರೆಮಾಚಿ ಈ ಸುಳ್ಳು ದಾವೆಯನ್ನು ತಂದಿದ್ದಾರೆ. ತಾವುಗಳು , ತಾವು ಖರೀದಿ ಮಾಡಿರುವ ಸ್ವತ್ತುಗಳ ಬಾಬ್ತು ಸೂಕ್ತ ದಾಖಲೆಗಳನ್ನು ಹಾಜರುಪಡಿಸಿದ್ದೇವೆ. ಆದುದರಿಂದ ವಾದಿಯು ದಾವೆಯಲ್ಲಿ ಕೋರಿರುವ ಪರಿಹಾರಗಳನ್ನು ಪಡೆಯಲು ಅರ್ಹರಿರುವುದಿಲ್ಲ , ಆದುದರಿಂದ ದಾವೆಯನ್ನು ವಜಾಗೊಳಿಸಬೇಕೆಂದು ಕೋರಿದ್ದಾರೆ.

೮. <u>೫ ರಿಂದ ೮ನೇ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರದ ಸಂಕ್ಷಿಪ್ತ ವಿವರಃ</u>

೫ ರಿಂದ ೮ನೇ ಪ್ರತಿವಾದಿಗಳು ವಾದಪತ್ರದ ಎಲ್ಲಾ ವಿವರಗಳನ್ನು ಒಪ್ಪಿದ್ದಾರೆ. ಮುಂದುವರೆದು , ತಮ್ಮ ತಾತ ವೆಂಕಟೇಗೌಡ ಎಂಬುವವರು ದಾವಾ ಷೆಡ್ಯೂಲ್ ಸ್ವತ್ತುಗಳ ಮೂಲ ಮಾಲೀಕರು ಮತ್ತು ಸ್ವಾಧೀನದಾರರಾಗಿದ್ದು , ಅವರ ತಂದೆ ದೊಡ್ಡೇಗೌಡ ಎಂಬುವವರಿಂದ ಸದರಿ

ಸ್ವತ್ತುಗಳು ಅವರ ಭಾಗಕ್ಕೆ ಬಂದಿದ್ದವು. ಸದರಿ ವೆಂಕಟೇಗೌಡರವರು ೧೯೮೦ನೇ ಸಾಲಿನಲ್ಲಿ ಮರಣಹೊಂದಿದ್ದಾರೆ. ಅವರ ಜೀವಿತಾವಧಿಯಲ್ಲಾಗಲಿ ಅಥವಾ ಅವರ ಮರಣಾನಂತರವಾಗಲಿ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ವಿಭಾಗ ಮಾಡಿರುವುದಿಲ್ಲ. ಇಂದಿಗೂ ಸಹ ದಾವಾ ಷೆಡ್ಯೂಲ್ ಸ್ವತ್ತುಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳಾಗಿವೆ. ಸದರಿ ಸ್ವತ್ತುಗಳಲ್ಲಿ ವಾದಿ ಮತ್ತು ೧, ೨ನೇ ಪ್ರತಿವಾದಿಗಳ ಜೊತೆ ತಮ್ಮ ತಾಯಿ ಮಾಯಮ್ಮನವರೂ ಸಹ ಭಾಗಾಂಶದಾರರಾಗಿರುತ್ತಾರೆ. ಸದರಿ ಮಾಯಮ್ಮನವರ ಸ್ವತ್ತುಗಳಿಗೆ ೫ ರಿಂದ ೮ನೇ ಪ್ರತಿವಾದಿಗಳಾದ ತಾವುಗಳು ಹಕ್ಕುಳ್ಳವರಾಗಿದ್ದೇವೆ. ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ೧ನೇ ಪ್ರತಿವಾದಿಗೆ ಮಾತ್ರ ಹಕ್ಕು ಇರುವುದಿಲ್ಲ. ಅವರು ದಾವಾ ಷೆಡ್ಯೂಲ್ ಕೆಲವು ಸ್ವತ್ತುಗಳ ಮೇಲೆ ತಮ್ಮ ಪ್ರತ್ಯೇಕ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ. ೧ನೇ ಪ್ರತಿವಾದಿಯು ತಿಳಿಸಿದಂತೆ ದಿನಾಂಕ ೧೦.೩.೧೯೬೯ ರಂದು ವಾದಿ ಮತ್ತು ೧ನೇ ಪ್ರತಿವಾದಿಯ ನಡುವೆ ಯಾವುದೇ ವಿಭಾಗಗಳಾಗಿರುವುದಿಲ್ಲ. ೧ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ಸ್ವತ್ತುಗಳ ಬಾಬ್ತು ಯಾವುದೇ ಪ್ರತ್ಯೇಕ ಮಾಲೀಕತ್ವ ಮತ್ತು ಸ್ವಾಧೀನ ಇಲ್ಲದಿರುವ ಕಾರಣ ಸದರಿ ಯಾವುದೇ ಸ್ವತ್ತುಗಳನ್ನು ಮಾರಾಟ ಮಾಡಲು ಅವರಿಗೆ ಹಕ್ಕು ಇರುವುದಿಲ್ಲ. ಮುಂದುವರೆದು, ವೆಂಕಟೇಗೌಡರ ಜೀವಿತಾವಧಿಯಲ್ಲಿ ೫ ರಿಂದ ೮ನೇ ಪ್ರತಿವಾದಿಗಳ ಅಜ್ಜಿ ಗಿರಿಯಮ್ಮರವರಿಗೆ ಯಾವುದೇ ಭಾಗಾಂಶ ನೀಡಿರುವುದಿಲ್ಲ. ಆಕೆಗೆ ದಾವಾ ಷೆಡ್ಯೂಲ್ ೭ನೇ ಸ್ವತ್ತಿನಲ್ಲಿ ವಾಸಿಸುವಂತೆ ಅವಕಾಶ ನೀಡಲಾಗಿತ್ತು. ೧ನೇ ಪ್ರತಿವಾದಿಯು ಸದರಿ ಗಿರಿಯಮ್ಮನವರನ್ನು ನೋಡಿಕೊಳ್ಳುತ್ತಿದ್ದರು ಎಂಬ ಕಾರಣಕ್ಕೆ ದಾವಾ ಷೆಡ್ಯೂಲ್ ೭ನೇ ಸ್ವತ್ತಿನ ಮೇಲೆ ಅವರಿಗೆ ಸ್ವತಂತ್ರ ಹಕ್ಕು ಉದ್ಭವವಾಗುವುದಿಲ್ಲ. ಅಲ್ಲದೇ ೧ನೇ ಪ್ರತಿವಾದಿಯು ಸದರಿ ಗಿರಿಯಮ್ಮನವರನ್ನು ಎಂದೂ ಚೆನ್ನಾಗಿ ನೋಡಿಕೊಂಡಿಲ್ಲ. ಅವರು ತನ್ನ ಜೀವಿತಾವಧಿಯಲ್ಲಿ ವಾದಿಯ ಮನೆಯಲ್ಲಿ ಮತ್ತು ಮಾಯಮ್ಮನವರ ಮನೆಯಲ್ಲಿ ವಾಸಿಸುತ್ತಿದ್ದರು. ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲವೂ ಇಂದಿಗೂ ಸಹ ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು , ಅವುಗಳಲ್ಲಿ ತಾವುಗಳು ೧ / ೪ ಭಾಗಾಂಶ ಪಡೆಯಲು ಸಂಪೂರ್ಣ ಹಕ್ಕುದಾರರಾಗಿರುತ್ತೇವೆ , ಆದುದರಿಂದ ಈ ದಾವೆಯಲ್ಲಿ ತಮಗೂ ಸಹ ಭಾಗಾಂಶವನ್ನು ನೀಡಬೇಕೆಂದು ಕೋರಿದ್ದಾರೆ.

೯. ೩ ಮತ್ತು ೪ನೇ ಪ್ರತಿವಾದಿಗಳು ತಮ್ಮ ಹೆಚ್ಚುವರಿ ಪ್ರತಿವಾದ ಪತ್ರ ಸಲ್ಲಿಸಿದ್ದು , ಅದರಲ್ಲಿಯೂ ಸಹ ತಮ್ಮ ಹಿಂದಿನ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ವಿವರಗಳನ್ನೇ ಸಂಕ್ಷಿಪ್ತವಾಗಿ ಪುನರಾವರ್ತಿಸಿದ್ದಾರೆ.

೧೦. ತಮ್ಮ ದಾವೆಯನ್ನು ಸಾಬೀತುಪಡಿಸಲು ವಾದಿಯು ತಮ್ಮನ್ನು ಪಿಡಬ್ಲ್ಯೂ ೧ ಎಂದು ಸಾಕ್ಷೀಕರಿಸಿಕೊಂಡು ನಿಪಿ ೧ ರಿಂದ ನಿಪಿ ೨೨ ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ . ಪ್ರತಿವಾದಿಗಳು ತಮ್ಮ ಪರವಾಗಿ ೧ನೇ ಪ್ರತಿವಾದಿಯನ್ನು ಡಿಡಬ್ಲ್ಯೂ ೧ ಎಂದು , ಎ.ಟಿ.ನಾಗರಾಜು ಎಂಬುವವರನ್ನು ಡಿಡಬ್ಲ್ಯೂ ೨ ಎಂದು , ವಿ.ಶ್ರೀನಿವಾಸಗೌಡ ಎಂಬುವವರನ್ನು ಡಿಡಬ್ಲ್ಯೂ ೩ ಎಂದು , ೩ನೇ ಪ್ರತಿವಾದಿ ವೆಂಕಟರಾಮೇಗೌಡ ರವರು ತಮ್ಮನ್ನು ಡಿಡಬ್ಲ್ಯೂ ೪ ಎಂದು , ವೆಂಕಟರಾಮೇಗೌಡ ಎಂಬುವವರನ್ನು ಡಿಡಬ್ಲ್ಯೂ ೫ ಎಂದು , ಗಂಗಪ್ಪ ರವರನ್ನು ಡಿಡಬ್ಲ್ಯೂ ೬ ಎಂದು , ಬೆಟ್ಟಸ್ವಾಮಿಗೌಡ ಎಂಬುವವರನ್ನು ಡಿಡಬ್ಲ್ಯೂ ೭ ಎಂದು ಸಾಕ್ಷೀಕರಿಸಿಕೊಂಡು ನಿಡಿ ೧ ರಿಂದ ೨೭ ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ .

೧೧. ಈ ದಾವೆಯಲ್ಲಿ ರಚಿಸಲಾಗಿರುವ ವಿವಾದಾಂಶಗಳು ಈ ರೀತಿ ಇರುತ್ತವೆ.

**Issues**

1. **Whether the plaintiff proves that, suit schedule properties are joint family properties of plaintiff and defendants?**
2. **Whether the plaintiff is entitled ½ share in the suit properties?**
3. **Whether the an enquiry is necessary to ascertain mesne profits?**
4. **Whether the defendant proves that there was a partition of suit properties on 10.03.1969 as pleaded in page No.3 of written statement?**
5. **Whether the plaintiff is entitle for the reliefs?**
6. **What order or decree?**

**Additional Issues:**

1. **Whether the defendants No.3 and 4 prove that item NO.11 of suit property as sold by the plaintiff to the 1st defendant after partition**

**and thereafter the 1st defendant has sold the same in favour of 3rd defendant through registered sale deed in the year 1991?**

2. **Whether the defendant No.4 proves that he is the bona fide purchaser of item No.19 of suit property?**

**Additional issues**

1. **Whether the suit of the plaintiff is hit by the partial partition or not?**
2. **Whether the defendant No.1 proves that he has purchased the suit item No.11 to 17 from the plaintiff through registered sale deed on 04.01.1971?**

೧೨. ಎರಡೂ ಪಕ್ಷಕಾರರ ವಾದ ವಿವಾದಗಳನ್ನು ಆಲಿಸಿ, ಕಡತದಲ್ಲಿನ ದಾಖಲೆಗಳು ಹಾಗೂ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ನಂತರ ಮೇಲಿನ ಅಂಶಗಳಿಗೆ ಕೆಳಗಿನಂತೆ ಉತ್ತರಿಸಿದ್ದೇನೆ .

೧ನೇ ವಿವಾದಾಂಶ : ಸಕಾರಾತ್ಮಕವಾಗಿದೆ

2ನೇ ವಿವಾದಾಂಶ : ಸಕಾರಾತ್ಮಕವಾಗಿದೆ

೩ನೇ ವಿವಾದಾಂಶ : ಸಕಾರಾತ್ಮಕವಾಗಿದೆ

೪ನೇ ವಿವಾದಾಂಶ : ನಕಾರಾತ್ಮಕವಾಗಿದೆ

೫ನೇ ವಿವಾದಾಂಶ : ಸಕಾರಾತ್ಮಕವಾಗಿದೆ

ದಿನಾಂಕ ೨೮.೦೧.೨೦೧೩ ರಂದು ರಚಿಸಿರುವ ೧ ಮತ್ತು ೨ನೇ ಮುಂದುವರೆದ ವಿವಾದಾಂಶಗಳು

೧ನೇ ಹೆಚ್ಚುವರಿ ವಿವಾದಾಂಶ : ನಕಾರಾತ್ಮಕವಾಗಿದೆ

೨ನೇ ಹೆಚ್ಚುವರಿ ವಿವಾದಾಂಶ : ನಕಾರಾತ್ಮಕವಾಗಿದೆ

ದಿನಾಂಕ ೨೨.೦೮.೨೦೧೪ ರಂದು ರಚಿಸಿರುವ

೧ನೇ ಹೆಚ್ಚುವರಿ ವಿವಾದಾಂಶ ನಕಾರಾತ್ಮಕವಾಗಿದೆ

೨ನೇ ಹೆಚ್ಚುವರಿ ವಿವಾದಾಂಶ : ನಕಾರಾತ್ಮಕವಾಗಿದೆ

೬ನೇ ವಿವಾದಾಂಶ : ಅಂತಿಮ ಆದೇಶದಂತೆ ಕೆಳಗಿನ ಕಾರಣಗಳಿಂದ ;

: ಕಾರಣಗಳು :

೧೩. ೧ ನೇ ವಿವಾದಾಂಶ : ವಾದಿಯು ತನ್ನ ದಾವೆಯನ್ನು ಸಾಬೀತುಗೊಳಿಸಲು ತನ್ನನ್ನು ಪಿಡಬ್ಲ್ಯೂ ೧ ಎಂದು ಸಾಕ್ಷೀಕರಿಸಿಕೊಂಡಿದ್ದು , ತನ್ನ ಪರವಾಗಿ ಯಾವುದೇ ಸಾಕ್ಷೀದಾರರನ್ನು ವಿಚಾರಣೆಗೆ ಒಳಪಡಿಸಿಲ್ಲ . ೧ನೇ ಪ್ರತಿವಾದಿ , ೩ ಮತ್ತು ೪ ನೇ ಪ್ರತಿವಾದಿಗಳ ವಕೀಲರು ಪಿಡಬ್ಲ್ಯೂ ೧ ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದಾರೆ .

೧೪. ಪಿಡಬ್ಲ್ಯೂ ೧ ರವರು ದಿನಾಂಕ ೨೯.೦೫.೨೦೦೯ ರಂದು ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ದಾರೆ . ಆ ಸಮಯ ಯಾವುದೇ ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರ ಸಲ್ಲಿಸಿರಲಿಲ್ಲ . ನ್ಯಾಯಾಲಯವು ಪಿ.ಡಬ್ಲ್ಯೂ ೧ ರವರ ಪಾಟೀ ಸವಾಲಿಗೆ ದಿನಾಂಕವನ್ನು ನಿಗದಿಪಡಿಸಿದ ನಂತರ ೧ , ೩ , ೪ , ೫ ರಿಂದ ೮ನೇ ಪ್ರತಿವಾದಿಗಳು ತಮ್ಮ ಪ್ರತಿವಾದಪತ್ರವನ್ನು ಸಲ್ಲಿಸಿದ್ದು , ಆ ನಂತರ ದಾವೆಯ ಬಾಬ್ತು ವಿವಾದಾಂಶಗಳನ್ನು ರಚಿಸಲಾಗಿದೆ . ಸದರಿ ವಿವಾದಾಂಶಗಳ ಬಾಬ್ತು ವಾದಿಯು ಮತ್ತೊಮ್ಮೆ ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿದ್ದು, ಅದರಲ್ಲಿ ವಾದಪತ್ರದಲ್ಲಿನ

ಎಲ್ಲಾ ವಿವರಗಳನ್ನು ಸಂಕ್ಷಿಪ್ತವಾಗಿ ಪುನರಾವರ್ತಿಸಿದ್ದಾರೆ . ಪಿಡಬ್ಲ್ಯೂ ೧ ರವರನ್ನು ಮೊದಲಿಗೆ ೩ ಮತ್ತು ೪ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಿರುತ್ತಾರೆ. ಪಿಡಬ್ಲ್ಯೂ ೧ ರವರು ನಿಪಿ ೧ ರಿಂದ ೨೨ ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ . ೩ ಮತ್ತು ೪ನೇ ಪ್ರತಿವಾದಿಗಳ ಪರ ಶ್ರೀ ಕೆ.ಎಂ.ಪಿ ವಕೀಲರು ಪಿ.ಡಬ್ಲ್ಯೂ ೧ ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು, ಅದರಲ್ಲಿ ೩ ಮತ್ತು ೪ನೇ ಪ್ರತಿವಾದಿಗಳು ೧ನೇ ಪ್ರತಿವಾದಿಯಿಂದ ದಾವಾ ಷೆಡ್ಯೂಲ್ ೧೧ ಹಾಗೂ ೧೯ನೇ ಸ್ವತ್ತುಗಳನ್ನು ಖರೀದಿ ಮಾಡಿರುವ ಬಾಬ್ತು ಪ್ರಶ್ನಿಸಿದ್ದು , ಪಿಡಬ್ಲ್ಯೂ ೧ ರವರು ಶ್ರೀ ಕೆ.ಎಂ.ಪಿ , ವಕೀಲರು ನಡೆಸಿರುವ ಪಾಟೀಸವಾಲಿನ ಸಂಪೂರ್ಣ ವಿವರಗಳನ್ನು ಅಲ್ಲಗಳೆದಿದ್ದಾರೆ . ಶ್ರೀ ಕೆ.ಎಂ.ಪಿ ವಕೀಲರು ಪಿಡಬ್ಲ್ಯೂ ೧ ರವರನ್ನು , ಅವರು ಹಾಗೂ ೧ನೇ ಪ್ರತಿವಾದಿ ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದು , ಪಿಡಬ್ಲ್ಯೂ ೧ ರವರು ಬೆಂಗಳೂರಿಗೆ ವಾಸಕ್ಕೆಂದು ಹೋದ ಕಾರಣ ತಮ್ಮ ಪಾಲಿನ ಸ್ವತ್ತುಗಳನ್ನು ೧ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು , ಆ ನಂತರ ೧ನೇ ಪ್ರತಿವಾದಿ ದಾವಾ ಷೆಡ್ಯೂಲ್ ೧೧ ಹಾಗೂ ೧೯ನೇ ಸ್ವತ್ತನ್ನು ೩ ಹಾಗೂ ೪ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುವುದಾಗಿ ಪ್ರಶ್ನಿಸಿದ್ದಾರೆ . ಸದರಿ ಪ್ರಶ್ನೆಯನ್ನೂ ಸಹಾ ಪಿಡಬ್ಲ್ಯೂ ೧ ರವರು ಅಲ್ಲಗಳೆದಿದ್ದಾರೆ . ಶ್ರೀ ಕೆ.ಎಂ.ಪಿ ವಕೀಲರು ಪಿಡಬ್ಲ್ಯೂ ೧ ರವರನ್ನು ಅವರು ಬೆಂಗಳೂರಿನಲ್ಲಿ ಹೆಚ್ಚು ಸಮಯ ವಾಸಿಸುತ್ತಿದ್ದ ಕಾರಣ ಅವರು ಗ್ರಾಮಕ್ಕೆ ಬಂದು ತಮ್ಮ ತಂದೆ – ತಾಯಿಯರನ್ನು ಮತ್ತು ಅಕ್ಕಂದಿರನ್ನು ನೋಡಿಕೊಳ್ಳಲಿಲ್ಲ, ಆದುದರಿಂದ ೧ನೇ ಪ್ರತಿವಾದಿ ತನ್ನ ತಂದೆ – ತಾಯಿಗಳ ಯೋಗಕ್ಷೇಮ ಮತ್ತು ಅಕ್ಕಂದಿರ ವಿವಾಹ ಮತ್ತು ಯೋಗಕ್ಷೇಮ ನೋಡಿಕೊಂಡಿದ್ದು , ಅವರ ಎಲ್ಲಾ ಸ್ವತ್ತುಗಳನ್ನು ನಿರ್ವಹಿಸುತ್ತಿದ್ದರು ಮತ್ತು ಕುಟುಂಬವನ್ನು ಸಹಾ ನಿರ್ವಹಿಸುತ್ತಿದ್ದರೆಂದು ಪ್ರಶ್ನಿಸಿದ್ದು, ಪಿಡಬ್ಲ್ಯೂ ೧ ರವರು ಸದರಿ ವಿಚಾರವನ್ನೂ ಸಹಾ ಅಲ್ಲಗಳೆದಿದ್ದಾರೆ. ತಾನು ತಮ್ಮ ೨೦ನೇ ವಯಸ್ಸಿನಲ್ಲಿಯೇ ಬೆಂಗಳೂರಿಗೆ ವಾಸಕ್ಕೆಂದು ಹೋದರು ಹಾಗೂ ಪ್ರಸ್ತುತ ಅವರು ಅಡುಗೆ ಭಟ್ಟನಾಗಿ ಕೆಲಸ ಮಾಡಿಕೊಂಡಿದ್ದು , ತನ್ನ ಪತ್ನಿ ಹಾಗೂ ಮಗಳೊಡನೆ ಬೆಂಗಳೂರಿನಲ್ಲಿ ವಾಸವಿರುತ್ತಾರೆಂಬುದನ್ನು ಪಿಡಬ್ಲ್ಯೂ ೧ ರವರು ಒಪ್ಪಿದ್ದಾರೆ . ಡಿಡಬ್ಲ್ಯೂ ೧ ಹಾಗೂ ಇತರ ಪ್ರತಿವಾದಿಗಳು ವಾದಿ ಹಾಗೂ ೧ನೇ ಪ್ರತಿವಾದಿಯ ನಡುವೆ ಅವರ ಪಿತ್ರಾರ್ಜಿತ ಸ್ವತ್ತುಗಳು ವಿಭಾಗವಾಗಿವೆ ಎಂಬುದನ್ನು ಮತ್ತು ವಾದಿಯು ತಮ್ಮ ಭಾಗಕ್ಕೆ ಬಂದ ಸ್ವತ್ತುಗಳನ್ನು ೧ನೇ ಪ್ರತಿವಾದಿಗೆ ನೀಡಿ ಒಟ್ಟು ಕುಟುಂಬದಿಂದ ಬೇರ್ಪಟ್ಟು ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ವಾಸಕ್ಕಾಗಿ ಹೋದರು ಎಂಬುದನ್ನು

ಸಾಬೀತುಗೊಳಿಸಲು ವಿಫಲರಾಗಿದ್ದಾರೆ. ಡಿಡಬ್ಲ್ಯೂ ೧ ರವರು ತಮ್ಮ ಪರವಾಗಿ ತಮ್ಮನ್ನು ೧ನೇ ಸಾಕ್ಷಿಯಾಗಿ ಸಾಕ್ಷೀಕರಿಸಿಕೊಂಡಿದ್ದು , ಉಳಿದಂತೆ ೨ ರಿಂದ ೭ ರವರೆಗಿನ ಸಾಕ್ಷೀದಾರರರನ್ನು ವಿಚಾರಣೆಗೆ ಒಳಪಡಿಸಿದ್ದಾರೆ. ಸದರಿ ೬ ಮಂದಿ ಸಾಕ್ಷೀದಾರರು ವಾದಿ ಬೆಂಗಳೂರಿನಲ್ಲಿ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಹಾಗೂ ಅವರ ಕುಟುಂಬದ ಎಲ್ಲಾ ಸ್ವತ್ತುಗಳು ಪಾಲುಪಾರಿಕತ್‌ನ ಮೂಲಕ ವಿಭಾಗವಾಗಿವೆ , ಆದುದರಿಂದ ವಾದಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರಗಳು ಇರುವುದಿಲ್ಲ ಎಂಬುದನ್ನು ಸಾಬೀತುಗೊಳಿಸಲು ವಿಫಲರಾಗಿದ್ದಾರೆ .

೧೫. ಡಿಡಬ್ಲ್ಯೂ ೧ ರವರು ವಾದಿ ತನ್ನ ತಂದೆ – ತಾಯಿಗಳೊಡನೆ ವಾಸ ಮಾಡುತ್ತಿರಲಿಲ್ಲ ಮತ್ತು ತನ್ನ ಅಕ್ಕಂದಿರ ವಿವಾಹಗಳನ್ನು ಮಾಡಲಿಲ್ಲ , ತನ್ನ ಮತ್ತೊಬ್ಬರು ಅಕ್ಕ ನಿಂಗಮ್ಮಳು ಅಂಗವಿಕಲಳಾಗಿದ್ದ ಕಾರಣ ಅವರ ಯೋಗಕ್ಷೇಮವನ್ನು ಸಹಾ ನೋಡಿಕೊಂಡಿಲ್ಲ , ಮೇಲೆ ಹೇಳಿದ ಎಲ್ಲಾ ಕೆಲಸವನ್ನು ತಾನು ಮಾಡಿರುವುದಾಗಿ , ತನ್ನ ತಂದೆ ಮಾಡಿದ್ದ ಸಾಲವನ್ನೂ ಸಹಾ ತಾನೇ ತೀರಿಸಿರುವುದಾಗಿ ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತಿಳಿಸಿದ್ದಾರೆ . ತನ್ನ ಮೊದಲನೇ ಅಕ್ಕ ಮಾಯಮ್ಮ ತನಗಿಂತ ಸುಮಾರು ೧೫ ವರ್ಷ ದೊಡ್ಡವರು ಎಂದು ಡಿಡಬ್ಲ್ಯೂ ೧ ರವರು ತಿಳಿಸಿದ್ದಾರೆ. ಮುಂದುವರೆದು ಹಿಂದಿನ ಕಾಲದಲ್ಲಿ ಸಾಧಾರಣವಾಗಿ ಹೆಣ್ಣು ಮಕ್ಕಳಿಗೆ ೧೫ ರಿಂದ ೧೭ ವರ್ಷದ ಒಳಗೆ ಮದುವೆ ಮಾಡುತ್ತಿದ್ದರು ಎಂಬುದನ್ನು ಹಾಗೂ ತಮ್ಮ ಕುಟುಂಬದ ಇಬ್ಬರು ಹೆಣ್ಣು ಮಕ್ಕಳನ್ನು ಅದೇ ವಯಸ್ಸಿಗೆ ಮದುವೆ ಮಾಡಿದ್ದರು ಎಂಬುದನ್ನು ಸಹಾ ಒಪ್ಪಿದ್ದಾರೆ . ಡಿಡಬ್ಲ್ಯೂ ೧ ರವರು ತಿಳಿಸಿರುವಂತೆ ಅವರ ಅಕ್ಕಂದಿರಿಗೆ ಅವರ ೧೫ ಅಥವಾ ೧೭ ವರ್ಷಗಳಲ್ಲಿ ವಿವಾಹ ಆಗಿದ್ದಲ್ಲಿ ಡಿಡಬ್ಲ್ಯೂ ೧ ರವರು ಆ ಸಂದರ್ಭದಲ್ಲಿ ೧ ಅಥವಾ ೨ ವರ್ಷದ ಬಾಲಕನಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಕಾರಣ ಅವರೇ ತಿಳಿಸಿರುವಂತೆ, ಅವರ ಅಕ್ಕ ಮಾಯಮ್ಮ ಅವರಿಗಿಂತಲೂ ಸುಮಾರು ೧೫ ವರ್ಷ ಹಿರಿಯವರಾಗಿರುವ ಕಾರಣ ಮತ್ತು ಆಕೆ ತನ್ನ ೧೫ ರಿಂದ ೧೭ ವಯಸ್ಸಿನಲ್ಲಿ ಮದುವೆ ಆಗಿದ್ದಲ್ಲಿ ಡಿಡಬ್ಲ್ಯೂ ೧ ರವರು ಹೇಳಿದಂತೆ ಅವರು ಕೇವಲ ೧ ಅಥವಾ ೨ ವರ್ಷ ವಯಸ್ಸಿನ ಬಾಲಕನಾಗಿರಲು ಮಾತ್ರ ಸಾಧ್ಯ . ೧ ಅಥವಾ ೨ ವರ್ಷ ವಯಸ್ಸಿನ ಬಾಲಕನಿಗೆ ತನ್ನ ಸುತ್ತಮುತ್ತಲು ಏನು ನಡೆಯುತ್ತಿದೆ ಎಂಬ ಪ್ರಾಪಂಚಿಕ ಅರಿವು ಇರುವುದಿಲ್ಲ . ಮಗುವು ತನ್ನ ತಂದೆ – ತಾಯಿಗಳ ಮತ್ತು ಬಂಧು ಬಳಗದವರ ಆರೈಕೆಯಲ್ಲಿ ಬೆಳೆಯುವ ವಯಸ್ಸಿನಲ್ಲಿ ಡಿಡಬ್ಲ್ಯೂ ೧ ರವರು ತನ್ನ ಅಕ್ಕಂದಿರ ವಿವಾಹ ಮಾಡಿದ್ದಾರೆಂದು ಹೇಳಿರುವುದು ಹಾಸ್ಯಾಸ್ಪದವಾಗಿರುತ್ತದೆ . ಇದರಿಂದ ಡಿಡಬ್ಲ್ಯೂ ೧ ರವರು ತನ್ನ ತಂದೆ – ತಾಯಿಗಳು

ವಿವಾಹ ಮಾಡಿರುವ ಜವಾಬ್ದಾರಿಯನ್ನು ತಾನೇ ಮಾಡಿದ್ದೇನೆಂದು ನ್ಯಾಯಾಲಯದಲ್ಲಿ ತಿಳಿಸಿದ್ದಾರೆ ಎಂಬುದು ಕಂಡುಬರುತ್ತಿದೆ . ಡಿಡಬ್ಲ್ಯೂ ೧ ರವರು ತಮ್ಮ ತಂದೆ – ತಾಯಿಗಳ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು , ತನ್ನ ಮತ್ತೊಬ್ಬ ಅಕ್ಕ ನಿಂಗಮ್ಮಳು ಅಂಗವಿಕಲಳಾಗಿದ್ದ ಕಾರಣ ಆಕೆಯನ್ನು ಸಹಾ ಆಕೆಯ ಜೀವಿತಾವಧಿಯವರೆಗೂ ತಾನೇ ನೋಡಿಕೊಂಡಿದ್ದಾಗಿ ತಿಳಿಸಿ ಮತ್ತು ತಮ್ಮ ತಂದೆ – ತಾಯಿಯ ಹಾಗೂ ಅಕ್ಕಂದಿರ ಯೋಗಕ್ಷೇಮವನ್ನು ನೋಡಿಕೊಂಡ ಕಾರಣ ಅವರುಗಳ ಮದುವೆಯನ್ನು ಮತ್ತು ನಿಂಗಮ್ಮಳ ವಾಸಕ್ಕೆ ವ್ಯವಸ್ಥೆ ಮಾಡಿದ್ದ ಕಾರಣ , ಕುಟುಂಬದ ಸಾಲವನ್ನು ತೀರಿಸಿದ್ದ ಕಾರಣ ದಾವಾ ಷೆಡ್ಯೂಲ್ 7ನೇ ಸ್ವತ್ತನ್ನು ಪಂಚಾಯ್ತಿ ಪಾರಿಕತ್‌ನಲ್ಲಿ ತನಗೆ ಬಿಟ್ಟುಕೊಡಲಾಗಿತ್ತು ಎಂದು ತಿಳಿಸಿದ್ದಾರೆ . ಈಗಾಗಲೇ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ದಾವಾ ಷೆಡ್ಯೂಲ್ 7ನೇ ಸ್ವತ್ತನ್ನು ಡಿಡಬ್ಲ್ಯೂ 1 ರವರು ತಮ್ಮ ತಂದೆ – ತಾಯಿ ಮತ್ತು ಅಕ್ಕಂದಿರ ಯೋಗಕ್ಷೇಮ ನೋಡಿಕೊಂಡ ಕಾರಣ ಮತ್ತು ಅಕ್ಕಂದಿರ ವಿವಾಹ ಮಾಡಿದ ಕಾರಣ ಬಿಟ್ಟುಕೊಡಲಾಗಿದೆ ಎಂಬುದು ಸಹಾ ನಂಬಲರ್ಹವಾದ ವಿಚಾರವಾಗಿರುವುದಿಲ್ಲ . ಡಿಡಬ್ಲ್ಯೂ 1 ರವರು ಪಂಚಾಯ್ತಿ ಪಾರಿಕತ್ತನ್ನು ಮತ್ತು ಕ್ರಯಪತ್ರವನ್ನು ತಮಗೆ ಬೇಕಾದಂತೆ ಸೃಷ್ಟಿಸಿಕೊಂಡಿರುವ ಎಲ್ಲಾ ಲಕ್ಷಣಗಳು ಮೇಲ್ನೋಟಕ್ಕೆ ಕಂಡುಬರುತ್ತಿವೆ. ಡಿಡಬ್ಲ್ಯೂ 1 ರವರೇ ತಿಳಿಸಿರುವಂತೆ 1969ನೇ ಸಾಲಿನಲ್ಲಿ ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ಪಂಚಾಯ್ತಿ ಪಾರಿಕತ್‌ನ ಮೂಲಕ ವಿಭಾಗ ಮಾಡಿಕೊಂಡಿರುತ್ತಾರೆ , ಆದರೆ ಅವರೇ ಹೇಳುವಂತೆ ಅವರ ತಂದೆ 1977ನೇ ಸಾಲಿನಲ್ಲಿ ಮರಣ ಹೊಂದಿರುತ್ತಾರೆ . ಒಂದುವೇಳೆ ಪಂಚಾಯ್ತಿ ಪಾರಿಕತ್ ನಡೆದ ಸಂದರ್ಭದಲ್ಲಿ ವಾದಿ ಮತ್ತು 1 , 2ನೇ ಪ್ರತಿವಾದಿಗಳ ತಂದೆ 5 ರಿಂದ 8ನೇ ಪ್ರತಿವಾದಿಗಳ ತಾತ ಬದುಕಿದ್ದಲ್ಲಿ ಅವರಿಗೂ ಸಹಾ ಸದರಿ ಸ್ವತ್ತಿನಲ್ಲಿ ಭಾಗಾಂಶ ನೀಡಬೇಕಾಗಿತ್ತು ಅಥವಾ ಅವರ ಜೀವನಾಂಶಕ್ಕಾಗಿಯಾದರೂ ಯಾವುದೇ ಸ್ವತ್ತನ್ನು ಬಿಟ್ಟುಕೊಡಬೇಕಾಗಿತ್ತು . ಹಾಗಿದ್ದಲ್ಲಿ ಮಾತ್ರ ಅದು ಕಾನೂನಿನ ಅನ್ವಯ ಒಪ್ಪಬಹುದಾದ ಪಂಚಾಯ್ತಿ ಪಾರಿಕತ್ ಆಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿ ಮತ್ತು 1 ಮತ್ತು 2ನೇ ಪ್ರತಿವಾದಿಯ ತಾತನ ಸ್ವತ್ತಾಗಿದ್ದು , ಅವರ ಮರಣಾ ನಂತರ ವಾದಿಯ ತಂದೆಗೆ ಸಂಪೂರ್ಣ ಸ್ವತ್ತುಗಳು ಪಿತ್ರಾರ್ಜಿತವಾಗಿ ಬಂದಿದ್ದು , ಸದರಿ ಸ್ವತ್ತುಗಳಲ್ಲಿ ವಾದಿಯ ತಂದೆ ಬದುಕಿರುವ ಸಮಯದಲ್ಲಿ ಅವರಿಗೆ ಯಾವುದೇ ಭಾಗಾಂಶವನ್ನು ನೀಡದೆ ಅಥವಾ ಜೀವನಾಂಶಕ್ಕೆಂದು ಯಾವುದೇ ಸ್ವತ್ತನ್ನಾಗಲಿ ಹಣವನ್ನಾಗಲಿ ಅಥವಾ ಇನ್ನಿತರ ವ್ಯವಸ್ಥೆಗಳನ್ನಾಗಲಿ ಮಾಡದೆ ಕೇವಲ ವಾದಿ ಮತ್ತು 1ನೇ ಪ್ರತಿವಾದಿ ಮಾತ್ರ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುವುದು ಸಹಾ ನಂಬಲು ಅಸಾಧ್ಯವಾದ ವಿಚಾರವಾಗಿದೆ. ಹಿಂದೂ ವಾರಸ ಕಾಯ್ದೆಗೆ ತಿದ್ದುಪಡಿ ಬರುವ ಮೊದಲು ಹೆಣ್ಣು ಮಕ್ಕಳಿಗೆ

ಪಿತ್ರಾರ್ಜಿತ ಸ್ವತ್ತುಗಳಲ್ಲಿ ಭಾಗಾಂಶದ ಹಕ್ಕು ಇರಲಿಲ್ಲ ಎಂಬುದು ನಿಜವೇ ಆದರೂ ಪಿತ್ರಾರ್ಜಿತ ಸ್ವತ್ತುಗಳ ಬಾಬ್ತು ಮಕ್ಕಳುಗಳು ಮಾಡಿಕೊಂಡಿರುವ ವಿಭಾಗದಲ್ಲಿ ತಂದೆಗೆ ಯಾವುದೇ ಹಕ್ಕು ಇಲ್ಲ ಎಂಬುದು ಕಾನೂನು ಸಮ್ಮತವಲ್ಲ . ಡಿಡಬ್ಲ್ಯೂ 1 ರವರ ಪ್ರಕಾರ ಅವರ ತಂದೆಗೆ ಯಾವುದೇ ಭಾಗಾಂಶ ನೀಡದೇ ಮಾಡಿಕೊಂಡಿರುವ ನಿಡಿ 1 ಪಂಚಾಯ್ತಿ ಪಾರಿಕತ್‌ಗೆ ಯಾವುದೇ ಕಾನೂನಿನ ಮಾನ್ಯತೆ ಇರುವುದಿಲ್ಲ. ನಿಡಿ 1 ಪಂಚಾಯ್ತಿ ಪಾರಿಕತ್ ನೋಂದಾಯಿತ ದಾಖಲೆಯಾಗಿರುವುದಿಲ್ಲ . ಸದರಿ ದಾಖಲೆಯನ್ನು ಯಾರು ಹೇಗೆ ಬೇಕಾದರೂ ಸೃಷ್ಟಿಸಿಕೊಳ್ಳಬಹುದಾದ ಸಾಧ್ಯತೆಗಳು ಇರುತ್ತವೆ . ಆದುದರಿಂದ ಸದರಿ ದಾಖಲೆಯನ್ನು ಕಾನೂನಿನ ಅಡಿಯಲ್ಲಿ ಒಪ್ಪಲು ಸಾಧ್ಯವಿಲ್ಲವೆಂದು ಅಲ್ಲಗಳೆಯಲಾಗಿದೆ . ಉಳಿದಂತೆ 1ನೇ ಪ್ರತಿವಾದಿ ಅಥವಾ ಪ್ರತಿವಾದಿಗಳ ಪರ ಸಾಕ್ಷೀದಾರರುಗಳು ವಾದಿಯು ಒಟ್ಟು ಕುಟುಂಬದಿಂದ ಸಂಪೂರ್ಣವಾಗಿ ದೂರು ಉಳಿದಿದ್ದರು ಹಾಗೂ ಆದೇ ಕಾರಣದಿಂದ ಅವರಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಮತ್ತು ಅಧಿಕಾರಿಗಳು ಇರುವುದಿಲ್ಲ ಎಂಬುದನ್ನು ಸಾಬೀತುಗೊಳಿಸಲು ವಿಫಲರಾಗಿದ್ದಾರೆ ಮತ್ತು ಪಂಚಾಯ್ತಿ ಪಾರಿಕತ್ ಕಾನೂನಿನ ಅನ್ವಯ ಊರ್ಜಿತವಲ್ಲದ ದಾಖಲೆಯಾಗಿರುವ ಕಾರಣ ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿ ಮತ್ತು 1ನೇ ಪ್ರತಿವಾದಿ ಹಾಗೂ 2 , 5 ರಿಂದ 8ನೇ ಪ್ರತಿವಾದಿಗಳ ನಡುವೆ ವಿಭಾಗವಾಗಿಲ್ಲ ಎಂಬುದು ಸಾಬೀತಾಗಿರುವ ಕಾರಣ ದಾವಾ ಷೆಡ್ಯೂಲ್ ಸ್ವತ್ತುಗಳೆಲ್ಲವೂ ವಾದಿ , 1 , 2 ಹಾಗೂ 5 ರಿಂದ 8ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತುಗಳು ಎಂಬುದು ಸಾಬೀತಾಗಿರುತ್ತದೆ ಮತ್ತು ಅವರುಗಳು ಇಂದಿಗೂ ಸಹ ಒಟ್ಟು ಕುಟುಂಬದ ಸದಸ್ಯರಾಗಿ ಕಾನೂನುಸಮ್ಮತ ಹಕ್ಕುಗಳನ್ನು ಹೊಂದಿದ್ದಾರೆ ಎಂಬುದು ಸಾಬೀತಾಗಿರುವ ಕಾರಣ 1ನೇ ಅಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ .

೧೬. ೪ ನೇ ಅಂಶ ಮತ್ತು ದಿನಾಂಕ ೨೨.೦೧.೨೦೧೪ ರಂದು ಮಾಡಿರುವ ಹೆಚ್ಚುವರಿ 2ನೇ ವಿವಾದಾಂಶಗಳು : ಈ ಅಂಶಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ , ಎರಡು ವಿವಾದಾಂಶಗಳ ಪ್ರಕಾರ ೧ನೇ ಪ್ರತಿವಾದಿ ತನ್ನ ಮತ್ತು ವಾದಿಯ ನಡುವೆ ಪಂಚಾಯ್ತಿ ಪಾರಿಕತ್ ಆಗಿರುತ್ತದೆ ಹಾಗೂ ಆ ಮೂಲಕ ವಾದಿಯ ಭಾಗಾಂಶಕ್ಕೆ ಬಂದ ಸ್ವತ್ತುಗಳನ್ನು ತನಗೆ ಮಾರಾಟ ಮಾಡಿದ್ದಾರೆ ಎಂಬುದನ್ನು ಸಾಬೀತುಗೊಳಿಸಬೇಕಾಗಿರುತ್ತದೆ ಮತ್ತು ಎರಡು ವಿವಾದಾಂಶಗಳನ್ನು ಸಾಬೀತುಗೊಳಿಸುವ ಹೊಣೆಗಾರಿಕೆ ೧ನೇ ಪ್ರತಿವಾದಿಯ ಮೇಲೆ ಇರುವ ಕಾರಣ ಎರಡು ವಿವಾದಾಂಶಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ .

೧೭. ೧ನೇ ಪ್ರತಿವಾದಿ ತನ್ನ ಪ್ರತಿವಾದಪತ್ರದಲ್ಲಿ ವಿವರಿಸಿರುವ ವಿವರಗಳನ್ನು ಸಾಬೀತುಗೊಳಿಸುವ ಸಲುವಾಗಿ ತನ್ನ ಮತ್ತು ವಾದಿಯ ನಡುವೆ ತಮ್ಮ ಪಿತ್ರಾರ್ಜಿತ ಸ್ವತ್ತುಗಳ ಬಾಬ್ತು ಭಾಗಾಂಶದ ಪ್ರಕ್ರಿಯೆ ನಡೆದಿದೆ ಎಂದು ತೋರಿಸಲು ನಿಡಿ ೧ ಪಂಚಾಯತ್ ಪಾರಿಕತ್‌ನ್ನು ಹಾಜರುಪಡಿಸಿದ್ದಾರೆ ಹಾಗೂ ವಾದಿಯು ಅವರ ಭಾಗಾಂಶಕ್ಕೆ ಬಂದ ಸ್ವತ್ತುಗಳನ್ನು ತನಗೆ ಮಾರಾಟ ಮಾಡಿದ್ದಾರೆಂದು ತೋರಿಸಲು ನಿಡಿ ೨ ಕ್ರಯಪತ್ರವನ್ನು ಹಾಜರುಪಡಿಸಿದ್ದಾರೆ . ಈಗಾಗಲೇ ಹೇಳಿದಂತೆ ನಿಡಿ ೧ ಪಂಚಾಯ್ತಿ ಪಾರಿಕತ್ ನೋಂದಾಯಿತವಲ್ಲದ ದಾಖಲೆಯಾಗಿರುತ್ತದೆ ಮತ್ತು ಸದರಿ ದಾಖಲೆಯಲ್ಲಿನ ವಿವರಗಳನ್ನು ೧ನೇ ಪ್ರತಿವಾದಿಯ ಸ್ವಇಚ್ಛೆಗೆ ತಕ್ಕಂತೆ ಬರೆಯಲಾಗಿದೆ ಎಂಬುದನ್ನು ಸಹಾ ಈಗಾಗಲೇ ಮೇಲೆ ಚರ್ಚಿಸಲಾಗಿದೆ . ನಿಡಿ 1 ದಾಖಲೆಯನ್ನು ಪರಿಶೀಲಿಸಿದಾಗ ಅದರಲ್ಲಿ ವಾದಿ ಕಂಬೇಗೌಡನ ಪಾಲಿಗೆ ಬಂದ ಸ್ವತ್ತನ್ನು ' ಎ ' ಷೆಡ್ಯೂಲ್ ಸ್ವತ್ತು ಎಂಬುದಾಗಿ ತಿಳಿಸಿದ್ದು ಸರ್ವೆ ನಂ. 2/14 ರಲ್ಲಿ 4.12 ಗುಂಟೆ ವಿಸ್ತೀರ್ಣದ ಸ್ವತ್ತು . ಸರ್ವೆ ನಂ. 2/10 ರಲ್ಲಿ 2.6 , ಸರ್ವೆ ನಂ. 4/11 ರಲ್ಲಿ 6.12 , ಸರ್ವೆ ನಂಬರ್ 4/12 ರಲ್ಲಿ 7.12 , ಸರ್ವೆ ನಂ. 69/8 ರಲ್ಲಿ 13.28 , ಸರ್ವೆ ನಂಬರ್ 83/5 ರಲ್ಲಿ 3.6 , ಸರ್ವೆ ನಂ. 34/6ಎ ರಲ್ಲಿ 9.58 , ಸರ್ವೆ ನಂ. 34/6ಬಿ ರಲ್ಲಿ 15.97 ಸ್ವತ್ತುಗಳಾಗಿ ವಿಂಗಡಿಸಿ ವಾದಿಯ ಭಾಗಾಂಶಕ್ಕೆ ಬಂದ ಸ್ವತ್ತುಗಳೆಂದು ನೀಡಲಾಗಿದೆ . ಉಳಿದಂತೆ 1ನೇ ಪ್ರತಿವಾದಿಯ ಭಾಗಕ್ಕೆ ಬಂದ ಸ್ವತ್ತುಗಳನ್ನು ' ಬಿ ' ಷೆಡ್ಯೂಲ್ ಎಂಬುದಾಗಿ ನಮೂದಿಸಿ ಸರ್ವೆ ನಂ. 4/2 ರಲ್ಲಿ 24.55 , ಸರ್ವೆ ನಂ. 4/11 ರಲ್ಲಿ 6.66 , ಸರ್ವೆ ನಂ. 4/13 ರಲ್ಲಿ 7.63 , ಸರ್ವೆ ನಂ. 7/12 ರಲ್ಲಿ 2.7 , ಸರ್ವೆ ನಂ. 48/8 ರಲ್ಲಿ 54.35 , ಸರ್ವೆ ನಂ. 52/1 ರಲ್ಲಿ 1 ಎಕರೆ 92.80 , ಸರ್ವೆ ನಂ. 56/14 ರಲ್ಲಿ 4.57 , ಸರ್ವೆ ನಂ. 69/1ಎ ರಲ್ಲಿ 9.22 ಎಂಬುದಾಗಿ ನಮೂದಿಸಿದ್ದು , ಕೊನೆಯದಾಗಿ ಸರ್ವೆ ನಂಬರ್ ಒಂದನ್ನು ನಮೂದಿಸಿದ್ದು ಅದರಲ್ಲಿ 3/9 ಎಂಬುದಾಗಿ ಮಾತ್ರ ಕಂಡುಬರುತ್ತಿದೆ . ಅದರಲ್ಲಿ 1ನೇ ಪ್ರತಿವಾದಿಗೆ 2.13 ಗುಂಟೆ ಸ್ವತ್ತನ್ನು ನೀಡಲಾಗಿದೆ , ಅಲ್ಲದೆ ಕೊನೆಯಲ್ಲಿ " ಮನೆ ಪಾಳು ಹಾಳು " ಎಂಬುದಾಗಿ ನಮೂದಿಸಲಾಗಿದೆ. ಆದರೆ ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ನಮೂದಿಸಿರುವುದಿಲ್ಲ, ಕೊನೆಯಲ್ಲಿ ಜಾನುವಾರು ಮತ್ತು ಕಂಚು ಮುಟ್ಟು , ಪಂಚಲೋಹ ಇತ್ಯಾದಿ ಸಮಾನವಾಗಿ ಹಂಚಿಕೊಂಡಿರುತ್ತಾರೆ. ನಮ್ಮಗಳಿಗೆ ರಕ್ತ ಸಂಬಂಧವೇ ವಿನಃ ಆಸ್ತಿ ಮತ್ತು ಅರ್ಥ ಸಂಬಂಧವಾದ ಹಕ್ಕು ಯಾವುದೂ ಇರುವುದಿಲ್ಲ ಎಂಬುದಾಗಿ ನಮೂದಿಸಿ , ಸದರಿ ಪುಟದ ಕೊನೆಯಲ್ಲಿ ವಿ.ಕಂಬೆಗೌಡ ಮತ್ತು ವೆಂಕಟೇಗೌಡ ಎಂಬುದಾಗಿ ಸಹಿ ಮಾಡಲಾಗಿದೆ . ಸದರಿ ದಾಖಲೆಯ ಪ್ರಕಾರ 1ನೇ ಪ್ರತಿವಾದಿ,

ವಾದಿ ಮತ್ತು ತನ್ನ ನಡುವೆ ತನ್ನ ಒಟ್ಟು ಕುಟುಂಬದ ಸ್ವತ್ತುಗಳು ವಿಭಾಗವಾಗಿದೆ ಎಂಬುದನ್ನು ತೋರಿಸಿದ್ದಾರೆ . ದಾಖಲೆಯನ್ನು ಪರಿಶೀಲಿಸಲಾಗಿ ಸ್ವತ್ತುಗಳಲ್ಲಿ ಮತ್ತು ವಿಸ್ತೀರ್ಣಗಳಲ್ಲಿ ಹಲವು ಬದಲಾವಣೆಗಳು ಇರುತ್ತವೆ . ಸದರಿ ದಾಖಲೆಯಲ್ಲಿ ಯಾವ ಯಾವ ಸರ್ವೆ ನಂಬರ್ ಎಷ್ಟು ಎಷ್ಟು ವಿಸ್ತೀರ್ಣದ ಸ್ವತ್ತುಗಳಾಗಿವೆ , ಅವುಗಳನ್ನು ಸಮಾನವಾಗಿ ವಿಭಾಗ ಮಾಡಿರುವ ಬಗ್ಗೆ ನಮೂದುಗಳು ಕಂಡುಬರುವುದಿಲ್ಲ . ಸ್ವತ್ತುಗಳ ವಿಸ್ತೀರ್ಣದ ನಡುವೆ ವ್ಯತ್ಯಾಸಗಳು ಇರುತ್ತವೆ . ವ್ಯತ್ಯಾಸಗಳು ಇದ್ದ ಸಂದರ್ಭದಲ್ಲಿ ಸದರಿ ವ್ಯತ್ಯಾಸದ ಕಾರಣಗಳನ್ನು ನಮೂದಿಸಬೇಕಾಗಿದ್ದು , ಅದನ್ನೂ ಸಹಾ ನಿಡಿ 1 ರಲ್ಲಿ ನಮೂದಿಸಿರುವುದಿಲ್ಲ . ವಾದಿ ಮತ್ತು 1ನೇ ಪ್ರತಿವಾದಿ ಮಾತ್ರ ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ಸಮಾನವಾಗಿ ಭಾಗಾಂಶ ಮಾಡಿಕೊಂಡಿದ್ದಲ್ಲಿ ಸದರಿ ಸ್ವತ್ತುಗಳ ವಿವರಗಳು ಮತ್ತು ವಾದಿ ಹಾಗೂ 1ನೇ ಪ್ರತಿವಾದಿಗೆ ಎಲ್ಲಾ ಸರ್ವೆ ನಂಬರ್‌ಗಳಲ್ಲಿ ಸಮಾನವಾದ ವಿಸ್ತೀರ್ಣದ ಭಾಗಾಂಶ ಬರಬೇಕಾಗಿತ್ತು , ಆದರೆ ನಿಡಿ 1 ರಲ್ಲಿ ಅಂತಹ ವಿವರಗಳು ಕಂಡುಬರುತ್ತಿಲ್ಲ . ನಿಡಿ 1 ದಾಖಲೆಯನ್ನು ಸಾಬೀತುಗೊಳಿಸುವ ಸಲುವಾಗಿ ಡಿಡಬ್ಲ್ಯೂ 1 ರವರು ತಮ್ಮ ಪರವಾಗಿ ಡಿಡಬ್ಲ್ಯೂ 2 ಮತ್ತು ಡಿಡಬ್ಲ್ಯೂ 7 ರವರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿದ್ದಾರೆ . ಸದರಿಯವರ ಸಾಕ್ಷಿ ವಿಚಾರಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅವರುಗಳು ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಿಡಿ 1 ದಾಖಲೆಗೆ ತಮ್ಮ ತಂದೆ ಸಹಿ ಮಾಡಿದ್ದಾರೆ ಎಂಬುದಾಗಿ ತಿಳಿಸಿ , ತಮ್ಮ ತಂದೆಯ ಸಹಿಗಳನ್ನು ಗುರುತಿಸುವ ಸಲುವಾಗಿ 1ನೇ ಪ್ರತಿವಾದಿಯು ತಮ್ಮನ್ನು ನ್ಯಾಯಾಲಯಕ್ಕೆ ಕರೆಸಿಕೊಂಡ ಕಾರಣ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿರುವುದಾಗಿ ತಿಳಿಸಿದ್ದಾರೆ . ಸದರಿಯವರನ್ನು ವಾದಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು , ಡಿಡಬ್ಲ್ಯೂ 2 ರವರು ತಮ್ಮ ಪಾಟೀ ಸವಾಲಿನಲ್ಲಿ ದಾವಾ ಸ್ವತ್ತುಗಳೆಲ್ಲವು ವಾದಿ ಮತ್ತು 1ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳಾಗಿವೆ ಎಂದು ತಿಳಿಸಿದ್ದಾರೆ . ಅಲ್ಲದೆ ನಿಡಿ 1 ಕ್ಕೆ ತನ್ನ ತಂದೆ ಸಹಿ ಮಾಡಿದ್ದಾರೆ ಎಂದು ತಿಳಿಸಿದ್ದಾರೆ ಹಾಗೂ ನಿಡಿ 1 ರಲ್ಲಿ ತಮ್ಮ ತಂದೆಯ ಸಹಿಯನ್ನು ಗುರುತಿಸಿದ್ದಾರೆ . ತಮ್ಮ ತಂದೆ ತಿಮ್ಮೇಗೌಡ ಎಂಬುದಾಗಿ ಸಹಿ ಮಾಡುತ್ತಿದ್ದರು ಎಂಬುದಾಗಿ ತಿಳಿಸಿದ್ದು, ನಿಡಿ 1 ದಾಖಲೆಯನ್ನು ಪರಿಶೀಲಿಸಲಾಗಿ ಅದರಲ್ಲಿ "ಅಂಕನಹಳ್ಳಿ ತಮ್ಮೇಗೌಡ , ಪುಳ್ಳೇಗೌಡರ ಮಗ" ಎಂಬುದಾಗಿ ಬರೆಯಲಾಗಿದೆ . ಡಿಡಬ್ಲ್ಯೂ 2 ರವರ ಪ್ರಕಾರ ಅವರ ತಂದೆಯು ಕೇವಲ ತಮ್ಮೇಗೌಡ ಎಂಬುದಾಗಿ ಮಾತ್ರ ಸಹಿ ಮಾಡಿದ್ದರು . ಆದರೆ ನಿಡಿ 1 ದಾಖಲೆಯಲ್ಲಿ ನಿಡಿ 1(ಎ) ಸಹಿ ಮೇಲೆ ಹೇಳಿದಂತೆ ಅಂಕನಹಳ್ಳಿ ತಮ್ಮೆಗೌಡ ಪುಳ್ಳೇಗೌಡನ ಮಗ ಎಂಬುದಾಗಿ ನಮೂದಿಸಿದ್ದು, ಸದರಿ ಸಹಿಗೂ, ಡಿಡಬ್ಲ್ಯೂ 2 ರವರು ಹೇಳುವ ಸಾಕ್ಷಿ ವಿಚಾರಣೆಗೂ ಹೋಲಿಕೆ ಕಂಡುಬರುತ್ತಿಲ್ಲ, ಡಿಡಬ್ಲ್ಯೂ 2 ರವರು

ತಮ್ಮ ತಂದೆಯು ಎಲ್ಲಾ ದಾಖಲೆಗಳಲ್ಲಿಯೂ ಇದೇ ರೀತಿ ಸಹಿ ಮಾಡುತ್ತಿದ್ದರು ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ , ಅಲ್ಲದೆ ವಾದಿಯ ಪರ ವಕೀಲರು ನಿಡಿ 1 ದಾಖಲೆಯಲ್ಲಿ ಅಂಕನಹಳ್ಳಿ ತಮ್ಮೇಗೌಡ ಪುಳ್ಳೇಗೌಡರ ಮಗ ಎಂಬುದಾಗಿ ಬರೆಯಲಾಗಿದೆ ಎಂಬುದನ್ನು ಸಹಾ ಪ್ರಶ್ನಿಸಿದ್ದು , ಡಿಡಬ್ಲ್ಯೂ 2 ರವರು " ಇರಬಹುದು " ಎಂದು ಉತ್ತರಿಸಿದ್ದಾರೆ. ಅವರು ತಮ್ಮ ಸಾಕ್ಷಿ ವಿಚಾರಣೆಯಲ್ಲಿ ತನ್ನ ತಂದೆ ತಮ್ಮೇಗೌಡ ಎಂಬುದಾಗಿ ಸಹಿ ಮಾಡುತ್ತಾರೆ ಎಂದು ತಿಳಿಸಿದ್ದು , ಪಾಟೀಸವಾಲಿನಲ್ಲಿ ಕೇವಲ ಇರಬಹುದು ಎಂಬುದಾಗಿ ತಿಳಿಸಿರುವುದು ನಿಡಿ 1 ದಾಖಲೆಯಲ್ಲಿ ತಮ್ಮ ತಂದೆಯ ಸಹಿಯನ್ನು ಗುರುತಿಸಲು ವಿಫಲರಾಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ದಾವೆಯ ಕಾರಣಕ್ಕೆ ಮಾತ್ರ ತನ್ನ ತಂದೆಯ ಸಹಿಯನ್ನು ಗುರುತಿಸಿರುವರೇ ವಿನಃ ಅವರ ತಂದೆ ಯಾವ ಯಾವ ದಾಖಲೆಗಳಲ್ಲಿ ಯಾವ ರೀತಿ ಸಹಿ ಮಾಡುತ್ತಿದ್ದರು ಅಥವಾ ಅವರ ತಂದೆಯ ಸಹಿ ಯಾವ ರೀತಿ ಇತ್ತು ಎಂಬುದು ಅವರಿಗೆ ತಿಳಿದಿರುವ ಸಾಧ್ಯತೆಗಳು ಇಲ್ಲ . ಡಿಡಬ್ಲ್ಯೂ 2 ರವರು 1ನೇ ಪ್ರತಿವಾದಿ ಹೇಳಿಕೊಟ್ಟಂತೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು , ಉಳಿದಂತೆ ಡಿಡಬ್ಲ್ಯೂ 7 ರವರು ತಮ್ಮ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಿಡಿ 1 ಪತ್ರವನ್ನು ತನ್ನ ತಂದೆ ಬರೆದಿದ್ದರೆಂದು , ನಿಡಿ 1 ದಾಖಲೆಯಲ್ಲಿ ತಮ್ಮ ತಂದೆಯ ಸಹಿಯನ್ನು ಗುರುತಿಸಿದ್ದು , ಅದನ್ನು ನಿಡಿ 1(ಬಿ) ಎಂಬುದಾಗಿ ಗುರುತಿಸಲಾಗಿದೆ . ವಾದಿಯ ಪರ ವಕೀಲರು ಅವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು , ಅವರು ತಮ್ಮ ತಂದೆಯು ಪಂಚಾಯತ್ ಪಾರಿಕತ್ ಬರೆಯುವ ಸಂದರ್ಭ ತನ್ನನ್ನು ಸಹಾ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು , ಅವರ ಜೀವಿತಾವಧಿಯವರೆಗೂ ಪಂಚಾಯತ್ ಪಾರಿಕತ್ ಬರೆಯುವ ಕೆಲಸವನ್ನು ಮಾಡುತ್ತಿದ್ದರೆಂದು ತಿಳಿಸಿದ್ದು , ನಿಡಿ 1 ದಾಖಲೆಯನ್ನು ಬರೆಯುವ ಸಮಯ ತಾನು ನಾಲ್ಕು ವರ್ಷ ವಯಸ್ಸುಳ್ಳವನಾಗಿದ್ದೆನೆಂದು ತಿಳಿಸಿದ್ದಾರೆ . ನಿಡಿ 1 ನ್ನು ತನ್ನ ತಂದೆ ಬರೆದರು ಎಂಬ ಬಗ್ಗೆ 1ನೇ ಪ್ರತಿವಾದಿ ಮಾಹಿತಿಯನ್ನು ನೀಡಿದ್ದರು ಎಂಬುದನ್ನೂ ಸಹಾ ಅವರು ತಿಳಿಸಿದ್ದಾರೆ. ಅಲ್ಲದೇ ತನ್ನ ತಂದೆಯು ದಾಖಲೆಗಳಲ್ಲಿ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು ಎಂಬುದಾಗಿ ತಿಳಿಸಿದ್ದಾರೆ . ನಿಪಿ 1 ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ " ಮಂಜೇಗೌಡರ ಮಗ ವಿ.ಎಂ.ಬೋರೇಗೌಡ " ಎಂಬುದಾಗಿ ಬರೆಯಲಾಗಿದೆ ಎಂಬುದನ್ನು ಸಹಾ ಒಪ್ಪಿದ್ದಾರೆ . ಅವರ ತಂದೆಯ ಸಹಿ ಇತರೇ ದಾಖಲೆಗಳಲ್ಲಿಯೂ ಸಹಿ ಇದೇ ರೀತಿ ಇರುತ್ತದೆ ಎಂಬುದನ್ನು ತೋರಿಸಲು ಅವರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ . 2 ಹಾಗೂ 1ನೇ ಪ್ರತಿವಾದಿಯ ಪರವಾಗಿ ತಮ್ಮ ತಂದೆ ಸಾಕ್ಷೀದಾರರಾಗಿದ್ದರು ಹಾಗೂ ದಾಖಲೆಯನ್ನು ಬರೆದರು ಎಂಬುದನ್ನು ತಿಳಿಸಿದ್ದಾರೆಯೇ

ವಿನಃ ಅವರುಗಳಿಗೆ ನಿಡಿ 1 ರ ಬಾಬ್ತು ಯಾವುದೇ ಮಾಹಿತಿ ಇರುವುದಿಲ್ಲ . ಸದರಿ ಸಾಕ್ಷೀದಾರರ ಮೂಲಕ ಡಿಡಬ್ಲ್ಯೂ 1 ರವರು ನಿಡಿ 1 ದಾಖಲೆಯನ್ನು ಸಾಬೀತುಗೊಳಿಸಲು ಪ್ರಯತ್ನಿಸಿದ್ದು , ಅವರುಗಳು ತಮ್ಮ ತಂದೆಯು ಸಹಿಯನ್ನು ಯಾವ ರೀತಿ ಮಾಡುತ್ತಿದ್ದರು ಎಂಬುದನ್ನು ನಿಖರವಾಗಿ ಹೇಳುವಲ್ಲಿ ವಿಫಲರಾಗಿರುವ ಕಾರಣ ಮತ್ತು ದಾಖಲೆಯನ್ನು ತೋರಿಸಿ ಈ ರೀತಿ ಬರೆಯಲಾಗಿದೆ ಎಂದು ಹೇಳಿದ ನಂತರ "ಇರಬಹುದು " ಎಂಬುದಾಗಿ ಒಪ್ಪಿದ್ದಾರೆಯೇ ವಿನಃ ಸದರಿ ಸಹಿ ತನ್ನ ತಂದೆಯ ಸಹಿ ಎಂದಾಗಲಿ ಅಥವಾ ತಮ್ಮ ತಂದೆ ಹೀಗೆಯೇ ಸಹಿ ಮಾಡುತ್ತಿದ್ದರು ಎಂಬುದನ್ನಾಗಲಿ ನಿಖರವಾಗಿ ತಿಳಿಸದೇ ಇರುವ ಕಾರಣ ಸದರಿಯವರ ಸಾಕ್ಷಿ ವಿಚಾರಣೆಯಿಂದ ನಿಡಿ 1 ದಾಖಲೆಯನ್ನು ಸಾಬೀತುಗೊಳಿಸಲು ಡಿಡಬ್ಲ್ಯೂ 1 ರವರು ವಿಫಲರಾಗಿದ್ದಾರೆ ಹಾಗೂ ಆ ಮೂಲಕ ತನ್ನ ಮತ್ತು ವಾದಿಯ ನಡುವೆ ತಮ್ಮ ಪಿತ್ರಾರ್ಜಿತ ಸ್ವತ್ತುಗಳ ಬಾಬ್ತು ಯಾವುದೇ ವಿಭಾಗ ನಡೆದಿಲ್ಲ ಎಂಬುದೂ ಸಹಾ ಸಾಬೀತಾಗಿರುತ್ತದೆ.

೧೮. ಡಿಡಬ್ಲ್ಯೂ 1 ರವರು ತನ್ನ ಮತ್ತು ವಾದಿಯ ನಡುವೆ ತಮ್ಮ ಪಿತ್ರಾರ್ಜಿತ ಸ್ವತ್ತುಗಳು ನಿಡಿ 1 ರ ಪ್ರಕಾರ ವಿಭಾಗವಾಗಿದ್ದು , ಸದರಿ ವಿಭಾಗದ ಪ್ರಕಾರ ವಾದಿಯು ಅವರ ಭಾಗಾಂಶಕ್ಕೆ ಬಂದ ಸ್ವತ್ತುಗಳ ಬಾಬ್ತು ತನ್ನ ಹೆಸರಿಗೆ ನೋಂದಾಯಿತ ಕ್ರಯಪತ್ರ ಬರೆದುಕೊಟ್ಟಿದ್ದು , ನಂತರ ಬೆಂಗಳೂರಿಗೆ ಹೊರಟು ಹೋಗಿದ್ದಾರೆಂದು ತಿಳಿಸಿದ್ದಾರೆ . ನಿಡಿ 2 ದಾಖಲೆಯನ್ನು ಸಾಬೀತುಗೊಳಿಸುವ ಸಲುವಾಗಿ ಪ್ರತಿವಾದಿಯು ತನ್ನ ಪರವಾಗಿ ಡಿಡಬ್ಲ್ಯೂ 3 ಮತ್ತು 6 ರವರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿದ್ದಾರೆ . ಡಿಡಬ್ಲ್ಯೂ 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಾವಾ ಸ್ವತ್ತುಗಳು ವಾದಿ ಮತ್ತು 1ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳೆಂದು , ಅವುಗಳನ್ನು ಅವರು ದಿನಾಂಕ 10.03.1969 ರಲ್ಲಿ ಪಂಚಾಯ್ತಿ ಪಾರಿಕತ್‌ನ ಮೂಲಕ ವಿಭಾಗ ಮಾಡಿಕೊಂಡಿರುವುದಾಗಿ ಮತ್ತು ಸದರಿ ಪಂಚಾಯ್ತಿ ಪಾರಿಕತ್‌ನ ಮೂಲಕ ವಾದಿಗೆ 8 ಸ್ವತ್ತುಗಳು , ಪ್ರತಿವಾದಿಗೆ 11 ಸ್ವತ್ತುಗಳು ಬಂದಿದ್ದು , ಸದರಿ 8 ಸ್ವತ್ತುಗಳಲ್ಲಿ 7 ಸ್ವತ್ತುಗಳನ್ನು 1ನೇ ಪ್ರತಿವಾದಿಗೆ ವಾದಿಯು ದಿನಾಂಕ 29.12.1970 ರಂದು ಕ್ರಯಪತ್ರವನ್ನು ಬರೆದುಕೊಟ್ಟಿದ್ದು ಅದನ್ನು ದಿನಾಂಕ 04.01.1971 ರಂದು ನೋಂದಾಯಿಸಿಕೊಂಡಿರುತ್ತಾರೆ. ಸದರಿ ಕ್ರಯಪತ್ರಕ್ಕೆ ತನ್ನ ತಂದೆ ಸಹಿ ಮಾಡಿರುವುದಾಗಿ ತಿಳಿಸಿದ್ದು , ನ್ಯಾಯಾಲಯದಲ್ಲಿ ನಿಡಿ 2 ಕ್ರಯಪತ್ರದಲ್ಲಿ ತಮ್ಮ ತಂದೆಯ ಸಹಿಯನ್ನು ಗುರುತಿಸಿದ್ದಾರೆ . ಡಿಡಬ್ಲ್ಯೂ 3 ರವರು ತನ್ನ ತಂದೆಯು ಗ್ರಾಮದಲ್ಲಿ ಪಟೇಲರಾಗಿದ್ದು , ಅವರು ಪ್ರತಿನಿತ್ಯ ಯಾವ ಗ್ರಾಮಕ್ಕೆ ಹೋಗುತ್ತಿದ್ದರು ಮತ್ತು ಎಲ್ಲಿ ಪಂಚಾಯ್ತಿ ಮಾಡುತ್ತಿದ್ದರೆಂದು ತನಗೆ

ತಿಳಿದಿಲ್ಲವೆಂದು ತಿಳಿಸುವ ಮೂಲಕ ತನ್ನ ತಂದೆ ನಿಡಿ 2ಕ್ಕೆ ಯಾವ ಸಂದರ್ಭದಲ್ಲಿ ಸಾಕ್ಷಿಯಾಗಿ ಸಹಿ ಮಾಡಿದ್ದರು ಎಂಬುದು ಅವರಿಗೆ ಗೊತ್ತಿಲ್ಲ ಎಂಬುದನ್ನು ಸಾಬೀತುಗೊಳಿಸಿದ್ದಾರೆ . ಅಲ್ಲದೆ ವಾದಿ ಮತ್ತು 1ನೇ ಪ್ರತಿವಾದಿ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡ ಬಾಬ್ತು ಹಾಗೂ ಕ್ರಯಪತ್ರವನ್ನು ನೋಂದಾಯಿಸಿದ ಬಾಬ್ತು ತನ್ನ ತಂದೆ ಮಾತನಾಡುತ್ತಿದ್ದ ಕಾರಣ ತನಗೆ ತಿಳಿದಿತ್ತು ಎಂದು ತಿಳಿಸಿದ್ದಾರೆ ಮತ್ತು 1ನೇ ಪ್ರತಿವಾದಿ ಅವರ ವಕೀಲರಿಗೆ ತಿಳಿಸಿದ ಮಾಹಿತಿಯ ಅನ್ವಯ ತಯಾರಿಸಿದ ಪ್ರಮಾಣಪತ್ರಕ್ಕೆ ತಾನು ಸಹಿ ಮಾಡಿದ್ದೇನೆ , ತಾನು ಯಾವುದೇ ವಿಚಾರ ತಿಳಿದಿಲ್ಲ ಎಂದು ಸಾಕ್ಷಿ ವಿಚಾರಣೆ ನೀಡಿದ್ದಾರೆ . ಅವರ ಸಾಕ್ಷಿ ವಿಚಾರಣೆಯು 1ನೇ ಪ್ರತಿವಾದಿಯ ಸಾಕ್ಷಿಗೆ ಪೂರಕವಾಗಿ ಇರುವುದಿಲ್ಲ . ಕೇವಲ 1ನೇ ಪ್ರತಿವಾದಿ ತಿಳಿಸಿರುವ ವಿವರಗಳ ಆಧಾರದಲ್ಲಿ ನಿಡಿ 2 ರಲ್ಲಿ ತಮ್ಮ ತಂದೆಯ ಸಹಿ ಎಂದು ಗುರುತಿಸಿರುವುದು ಕಂಡುಬರುತ್ತಿದೆ . ಅಲ್ಲದೆ 1ನೇ ಪ್ರತಿವಾದಿ ನಿಡಿ 2 ರಲ್ಲಿ ಅವರ ತಂದೆಯ ಸಹಿಯನ್ನು ಗುರುತಿಸಲು ಕರೆದ ಕಾರಣ ತಾನು ಬಂದಿರುವುದಾಗಿ ಸಹಾ ಡಿಡಬ್ಲ್ಯೂ 3 ರವರು ತಿಳಿಸಿದ್ದಾರೆ . 1ನೇ ಪ್ರತಿವಾದಿ ತಿಳಿಸಿರುವ ಮಾಹಿತಿಯ ಆಧಾರದಲ್ಲಿ ಡಿ.ಡಬ್ಲ್ಯೂ 3 ರವರು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ನೀಡಿದ್ದು , ನಿಡಿ 2 ರಲ್ಲಿ ಅವರ ತಂದೆಯ ಸಹಿಯನ್ನು ಗುರುತಿಸಿರುವುದು ಕೇವಲ 1ನೇ ಪ್ರತಿವಾದಿಯ ಹೇಳಿಕೆಯ ಆಧಾರದಲ್ಲಿ ಎಂಬುದು ಕಂಡುಬರುತ್ತದೆ. ಡಿಡಬ್ಲ್ಯೂ 1 ರವರು ಹೇಳಿದಂತೆ ಸಾಕ್ಷಿ ವಿಚಾರಣೆ ನೀಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿರುವ ವಿಚಾರವಾಗಿದೆ .

೧೯. ಡಿಡಬ್ಲ್ಯೂ 6 ರವರು ನಿಡಿ 2 ನ್ನು ತಾನು ಬರೆದಿರುವುದಾಗಿ ತಿಳಿಸಿದ್ದಾರೆ . ಅವರನ್ನು ಸಹಾ ವಾದಿಯ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು ಅವರ ಸಾಕ್ಷಿ ವಿಚಾರಣೆಯಿಂದಲೂ ಸಹಾ 1ನೇ ಪ್ರತಿವಾದಿಗೆ ಯಾವುದೇ ಸಹಾಯ ದೊರೆತಿರುವುದಿಲ್ಲ . ಕಾರಣ ಈಗಾಗಲೇ ತಿಳಿದಂತೆ ವಾದಿ ಮತ್ತು 1ನೇ ಪ್ರತಿವಾದಿ ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುವ ಬಾಬ್ತು 1ನೇ ಪ್ರತಿವಾದಿ ಹಾಜರುಪಡಿಸಿರುವ ಪಂಚಾಯ್ತಿ ಪಾರಿಕತ್ ಕಾನೂನಿನಡಿಯಲ್ಲಿ ಊರ್ಜಿತವಲ್ಲವೆಂದು ಈ ನ್ಯಾಯಾಲಯವು ಈಗಾಗಲೇ ಪರಿಗಣಿಸಿರುವ ಕಾರಣ ಆ ಮೇರೆಗೆ ವಾದಿಯ ಭಾಗಾಂಶಕ್ಕೆ ಬಂದ ಸ್ವತ್ತುಗಳೆಂದು ಹಾಗೂ ಅವುಗಳನ್ನು ವಾದಿ ತನಗೆ ಮಾರಾಟ ಮಾಡಿದ್ದಾರೆಂದು ಹೇಳುವ 1ನೇ ಪ್ರತಿವಾದಿಯ ಪ್ರತಿವಾದವನ್ನು ಸಹಾ ಅಲ್ಲಗಳೆಯಲಾಗಿದೆ . ಈಗಾಗಲೇ 1ನೇ ಅಂಶಕ್ಕೆ ಚರ್ಚಿಸಿದಂತೆ ಪಂಚಾಯ್ತಿ ಪಾರಿಕತ್‌ನಲ್ಲಿ 8 ಸ್ವತ್ತುಗಳನ್ನು ವಾದಿಗೆ ನೀಡಿದ್ದು , 11 ಸ್ವತ್ತುಗಳನ್ನು 1ನೇ ಪ್ರತಿವಾದಿಗೆ

ಬಂದಿದೆ ಎಂದು ಪ್ರತಿವಾದಪತ್ರದಲ್ಲಿ ತಿಳಿಸಿದ್ದು , ಅದಕ್ಕೆ ಕಾರಣಗಳನ್ನು ಪಂಚಾಯ್ತಿ ಪಾರಿಕತ್‌ನಲ್ಲಿ ನಮೂದಿಸಬೇಕಾಗಿದ್ದು , ಒಂದುವೇಳೆ 1ನೇ ಪ್ರತಿವಾದಿ ತಮ್ಮ ತಂದೆ – ತಾಯಿಯ ಮತ್ತು ಅಕ್ಕಂದಿರ ಯೋಗಕ್ಷೇಮವನ್ನು ನೋಡಿಕೊಂಡು ಅಕ್ಕಂದಿರ ವಿವಾಹವನ್ನು ಮಾಡಿ ತನ್ನ ಅಕ್ಕ ನಿಂಗಮ್ಮಳ ಅಂತಿಮ ಕಾಲದವರೆಗೂ ಆಕೆಯ ಯೋಗಕ್ಷೇಮವನ್ನು ನೋಡಿಕೊಂಡಿದ್ದೆ ಆಗಿದ್ದಲ್ಲಿ ಅದರ ಬಾಬ್ತು ವಿವರಗಳನ್ನು ನಮೂದಿಸಿ ಅವರಿಗೆ ಹೆಚ್ಚಿನ 3 ಸ್ವತ್ತುಗಳನ್ನು ನೀಡಲಾಗಿದೆ ಎಂಬುದನ್ನು ಸದರಿ ಪಂಚಾಯ್ತಿ ಪಾರಿಕತ್‌ನಲ್ಲಿ ನಮೂದಿಸಬೇಕಾಗಿತ್ತು .

೨೦. 1ನೇ ಪ್ರತಿವಾದಿಯ ಪರ ವಕೀಲರು ವಾದಿಯ ಪಾಟೀ ಸವಾಲಿನಲ್ಲಿ ಸಾಧಾರಣವಾಗಿ ಹಳ್ಳಿಗಳಲ್ಲಿ ಕುಟುಂಬದ ಕರ್ತನಾಗಿ ತಂದೆಯು ವ್ಯವಹಾರಗಳನ್ನು ಮತ್ತು ಕುಟುಂಬದ ನಿರ್ವಹಣೆ ಮಾಡುತ್ತಾರೆ , ಅವರ ಮರಣಾನಂತರ ಹಿರಿಯ ಮಗನು ಕುಟುಂಬದ ವ್ಯವಹಾರ ಮತ್ತು ಕಾರ್ಯವನ್ನು ನಿರ್ವಹಿಸುತ್ತಾನೆ , ಒಂದುವೇಳೆ ಹಿರಿಯ ಮಗ ಕುಟುಂಬದಲ್ಲಿ ಇಲ್ಲದಿದ್ದಲ್ಲಿ ಹಾಗೂ ಕುಟುಂಬದವನ್ನು ತೊರೆದು ಹೋದಲ್ಲಿ ಅಥವಾ ಜವಾಬ್ದಾರಿಯನ್ನು ಬಿಟ್ಟುಕೊಟ್ಟಲ್ಲಿ ಕಿರಿಯ ಮಗ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ ಎಂಬುದಾಗಿ ಪ್ರಶ್ನಿಸಿದ್ದು , ವಾದಿಯು ಅದನ್ನು ಒಪ್ಪಿದ್ದಾರೆ . ಆ ಮೂಲಕ ವಾದಿಯು ತಾನು ಬೆಂಗಳೂರಿಗೆ ಕೆಲಸದ ಬಾಬ್ತು ಹೋಗಬೇಕಿದ್ದ ಕಾರಣ ತನ್ನ ಪಿತ್ರಾರ್ಜಿತ ಸ್ವತ್ತುಗಳೆಲ್ಲವನ್ನು 1ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಾನೆ ಎಂಬ ವಿಶ್ವಾಸದಿಂದ ಎಲ್ಲಾ ಸ್ವತ್ತುಗಳನ್ನು ಆತನಿಗೆ ಬಿಟ್ಟು ಬೆಂಗಳೂರಿನಲ್ಲಿ ಕೆಲಸ ಹುಡುಕಿ ಹೋಗಿದ್ದರು . 1ನೇ ಪ್ರತಿವಾದಿಯೇ ತಮ್ಮ ಎಲ್ಲಾ ಪಿತ್ರಾರ್ಜಿತ ಸ್ವತ್ತುಗಳನು ನೋಡಿಕೊಳ್ಳುತ್ತಿದ್ದು , ವಾದಿಗೆ ಸಲ್ಲಬೇಕಾದ ಭಾಗಾಂಶವನ್ನು ನೀಡಿಲ್ಲ ಎಂಬುದು ತಿಳಿದುಬರುತ್ತದೆ . 1ನೇ ಪ್ರತಿವಾದಿಯು ದಾವಾ ಷೆಡ್ಯೂಲ್ 11 ರಿಂದ 19ನೇ ಸ್ವತ್ತುಗಳನ್ನು ವಾದಿಯಿಂದ ದಿನಾಂಕ 04.01.1971 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿ ಮಾಡಿರುವುದನ್ನು ಸಾಬೀತುಗೊಳಿಸಲು ಇಬ್ಬರು ಸಾಕ್ಷೀದಾರರನ್ನು ಸಾಕ್ಷಿ ವಿಚಾರಣೆಗೆ ಒಳಪಡಿಸಿದ್ದರೂ ಸಹಾ ಅವರು ನೀಡಿರುವ ಸಾಕ್ಷಿ ವಿಚಾರಣೆಯು 1ನೇ ಪ್ರತಿವಾದಿಯ ಪ್ರತಿವಾದಪತ್ರಕ್ಕೆ ಮತ್ತು ಅವರ ಸಾಕ್ಷಿ ವಿಚಾರಣೆಗೆ ಪೂರಕವಾಗಿರುವುದಿಲ್ಲ . ಆದುದರಿಂದ 1ನೇ ಪ್ರತಿವಾದಿಯು ಹೇಳುವಂತೆ ವಾದಿ ಹಾಗೂ 1 , 2 , 5 ರಿಂದ 8ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿದ್ದು , ವಾದಿ ಮತ್ತು 1ನೇ ಪ್ರತಿವಾದಿಯು ಸದರಿ ಸ್ವತ್ತುಗಳನ್ನು ಹಂಚಿಕೊಂಡಿದ್ದು , ವಾದಿಯು ತನ್ನ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ದಾವಾ ಷೆಡ್ಯೂಲ್ 11 ರಿಂದ 19ನೇ ಸ್ವತ್ತುಗಳನ್ನು ಪ್ರತಿವಾದಿಗೆ ಮಾರಾಟ

ಮಾಡಿದ್ದಾರೆ ಎಂಬುದನ್ನು ಪರಿಗಣಿಸಲು ಸಾಧ್ಯವಿಲ್ಲ . ಆದ್ದರಿಂದ ಈ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ .

೨೧. ದಿನಾಂಕ 28.01.2013 ರಂದು ರಚಿಸಿರುವ 1 ಮತ್ತು 2ನೇ ಮುಂದುವರೆದ ವಿವಾದಾಂಶಗಳು : ಈ ವಿವಾದಾಂಶಗಳನ್ನು ಸಾಬೀತುಗೊಳಿಸುವ ಹೊಣೆಗಾರಿಕೆ 3 ಮತ್ತು 4ನೇ ಪ್ರತಿವಾದಿಗಳ ಮೇಲೆ ಇರುತ್ತದೆ . ಅವರು ತಮ್ಮ ಪರವಾಗಿ ಪ್ರತಿವಾದಪತ್ರವನ್ನು ಸಲ್ಲಿಸಿದ್ದು , ಅದರಲ್ಲಿ ತಾವುಗಳು ದಾವಾ ಷೆಡ್ಯೂಲ್ 11 ಹಾಗೂ 19ನೇ ಸ್ವತ್ತುಗಳನ್ನು ಖರೀದಿಸಿದ ಖರೀದಿದಾರರಾಗಿದ್ದು , 1ನೇ ಪ್ರತಿವಾದಿಯ ಕುಟುಂಬದ ಆರ್ಥಿಕ ಅವಶ್ಯಕತೆಗಳಿಗಾಗಿ ಅವರಿಗೆ ಸ್ವತ್ತನ್ನು ಮಾರಾಟ ಮಾಡುವ ಅನಿವಾರ್ಯತೆ ಇತ್ತು , ಆ ಕಾರಣ ಅವರಿಗೆ ಅಗತ್ಯವಿದ್ದ ಹಣವನ್ನು ಒದಗಿಸಿ ಸದರಿ ದಾವಾ ಷೆಡ್ಯೂಲ್ 11 ಮತ್ತು 19ನೇ ಸ್ವತ್ತನ್ನು ತಾವುಗಳು ಖರೀದಿಸಿರುವುದಾಗಿ ಮತ್ತು ತಮ್ಮ ಖರೀದಿ ನ್ಯಾಯಬದ್ಧವಾಗಿದೆ ಎಂದು ಮತ್ತು ಸ್ವತ್ತುಗಳ ಬಾಬ್ತು ತಾವು ನೋಂದಾಯಿತ ಕ್ರಯಪತ್ರ ಹೊಂದಿರುವುದಾಗಿ ತಿಳಿಸಿದ್ದಾರೆ. 3 ಮತ್ತು 4ನೇ ಪ್ರತಿವಾದಿಗಳು ತಮ್ಮ ಪ್ರತಿವಾದಪತ್ರದಲ್ಲಿನ ವಿಚಾರಗಳನ್ನು ಸಾಬೀತುಗೊಳಿಸುವ ಸಲುವಾಗಿ ತಮ್ಮನ್ನು ಡಿಡಬ್ಲ್ಯೂ 4 ಮತ್ತು 5 ಎಂಬುದಾಗಿ ಸಾಕ್ಷಿ ವಿಚಾರಣೆ ಮಾಡಿಕೊಂಡಿರುತ್ತಾರೆ ಹಾಗೂ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಮ್ಮ ಪ್ರತಿವಾದಪತ್ರದಲ್ಲಿನ ವಿವರಗಳನ್ನು ಸಂಕ್ಷಿಪ್ತವಾಗಿ ಪುನರಾವರ್ತಿಸಿದ್ದಾರೆ . ಈಗಾಗಲೇ ಮೇಲಿನ ಅಂಶಗಳಿಗೆ ಚರ್ಚಿಸಿರುವ ಪ್ರಕಾರ ವಾದಿ ಮತ್ತು 1ನೇ ಪ್ರತಿವಾದಿಯು ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ಪಂಚಾಯತ್ ಪಾಲುಪಾರಿಕತ್‌ನ ಮೂಲಕ ವಿಭಾಗ ಮಾಡಿಕೊಂಡಿರುವುದನ್ನು ಸಾಬೀತುಗೊಳಿಸಲು 1ನೇ ಪ್ರತಿವಾದಿಯು ವಿಫಲರಾಗಿರುವ ಕಾರಣ 1ನೇ ಪ್ರತಿವಾದಿಯೊಬ್ಬರಿಗೆ ದಾವಾ ಷೆಡ್ಯೂಲ್ 11 ಮತ್ತು 19ನೇ ಸ್ವತ್ತುಗಳನ್ನು ಮಾರಾಟ ಮಾಡಲು ಯಾವುದೇ ಹಕ್ಕುಗಳು ಇರುವುದಿಲ್ಲ . ಪಿತ್ರಾರ್ಜಿತ ಸ್ವತ್ತುಗಳನ್ನು ವಾದಿ ಹಾಗೂ 1 , 2 , 5 ರಿಂದ 8ನೇ ಪ್ರತಿವಾದಿಗಳು ವಿಭಾಗ ಮಾಡಿಕೊಳ್ಳದ ಹೊರತು 1ನೇ ಪ್ರತಿವಾದಿಗೆ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ಪರಭಾರೆ ಮಾಡುವ ಯಾವುದೇ ರೀತಿಯ ವೈಯಕ್ತಿಕ ಹಕ್ಕು ಉದ್ಭವಿಸುವುದಿಲ್ಲ . ಅವರು ಸದರಿ ಸ್ವತ್ತುಗಳನ್ನು ಒಟ್ಟು ಕುಟುಂಬದ ಒಳಿತಿಗಾಗಿ ಮಾರಾಟ ಮಾಡಿದ್ದಾರೆಯೇ ಇಲ್ಲವೆ ಎಂಬುದನ್ನು ಅವರೇ ಸಾಬೀತುಗೊಳಿಸಬೇಕಿರುತ್ತದೆ . ಆದರೆ ಪ್ರಸ್ತುತ ದಾವೆಯಲ್ಲಿ 1ನೇ ಪ್ರತಿವಾದಿಯು ತನ್ನ ಮತ್ತು ವಾದಿಯ ನಡುವೆ ಒಟ್ಟು ಕುಟುಂಬದ ವ್ಯವಸ್ಥೆ ಇಲ್ಲವೆಂದು ತಿಳಿಸಿರುವ ಕಾರಣ ಮತ್ತು ತನ್ನ ಮತ್ತು ವಾದಿಯ ನಡುವೆ ಪಂಚಾಯತ್ ಪಾರಿಕತ್ ಹಾಗೂ ಕ್ರಯಪತ್ರವನ್ನು ಸಾಬೀತುಗೊಳಿಸಲು

ವಿಫಲರಾಗಿರುವ ಕಾರಣ ಅವರು 3 ಮತ್ತು 4ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುವ ಸ್ವತ್ತುಗಳ ಬಾಬ್ತು ಸಹಾ ವಾದಿಗೆ ಎಲ್ಲಾ ರೀತಿಯ ಭಾಗಾಂಶದ ಹಕ್ಕು ಇರುತ್ತದೆ ಎಂದು ನ್ಯಾಯಾಲಯವು ಪರಿಗಣಿಸುತ್ತದೆ .

೨೨. 3 ಮತ್ತು 4ನೇ ಪ್ರತಿವಾದಿಗಳು ತಮ್ಮ ಸಾಕ್ಷಿ ವಿಚಾರಣೆಯನ್ನು ಮಾಡಿಕೊಂಡಿದ್ದು , ವಾದಿಯ ಪರ ವಕೀಲರು ಅವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು , ಸದರಿ ಪಾಟೀ ಸವಾಲಿನಲ್ಲಿ 1ನೇ ಪ್ರತಿವಾದಿಯು ಆರ್ಥಿಕ ಅವಶ್ಯಕತೆಗಾಗಿ ಸ್ವತ್ತನ್ನು ಮಾರಾಟ ಮಾಡಲು ಮುಂದಾಗಿದ್ದು ತಾವುಗಳು ಸತ್ತನ್ನು ಖರೀದಿ ಮಾಡಿರುವುದಾಗಿ ತಿಳಿಸಿದ್ದಾರೆ . ಈ ದಾವೆಯ ಬಾಬ್ತು ಈ ನ್ಯಾಯಾಲಯದಿಂದ ಅಂತಿಮ ತೀರ್ಮಾನ ಆದ ನಂತರ 1ನೇ ಪ್ರತಿವಾದಿಯ ಭಾಗಾಂಶಕ್ಕೆ ಯಾವ ಯಾವ ಸ್ವತ್ತುಗಳು ಬರುತ್ತವೆಯೋ ಆ ಸ್ವತ್ತುಗಳಲ್ಲಿ 3 ಮತ್ತು 4ನೇ ಪ್ರತಿವಾದಿಗಳು ಖರೀದಿಸಿರುವ ಸ್ವತ್ತುಗಳು 1ನೇ ಪ್ರತಿವಾದಿಯ ಭಾಗಾಂಶಕ್ಕೆ ಬಂದಲ್ಲಿ 1ನೇ ಪ್ರತಿವಾದಿಯಿಂದ 3 ಮತ್ತು 4ನೇ ಪ್ರತಿವಾದಿಗಳು ಖರೀದಿಸಿರುವ ಸ್ವತ್ತುಗಳನ್ನು ಅವರೇ ಉಳಿಸಿಕೊಳ್ಳುವ ನಿರ್ಣಯ ಕೈಗೊಳ್ಳಬಹುದಾಗಿದೆ . ಆದರೆ ಸದರಿ ನಿರ್ಣಯ ಕೈಗೊಳ್ಳುವ ಮುನ್ನ ವಾದಿ ಮತ್ತು 1 , 2 ಹಾಗೂ 5 ರಿಂದ 8ನೇ ಪ್ರತಿವಾದಿಗಳು ಒಟ್ಟುಗೂಡಿ ರಾಜಿ ಸಂಧಾನವನ್ನು ಮಾಡಿಕೊಂಡು ಆ ಮೂಲಕ ತಲಾ 1/4 ಭಾಗಾಂಶವನ್ನು ಪಡೆದು ನಂತರವಷ್ಟೇ ಮೇಲೆ ತಿಳಿಸುವಂತಹ ನಿರ್ಣಯ ಕೈಗೊಳ್ಳಬಹುದಾಗಿದೆ . ಆದರೆ ಎಲ್ಲಾ ಪಕ್ಷಕಾರರ ಒಪ್ಪಿಗೆಯೂ ಸಹಾ ಅಂತಹ ನಿರ್ಣಯಕ್ಕೆ ಅತ್ಯಗತ್ಯವಾಗಿರುತ್ತದೆ . 1ನೇ ಪ್ರತಿವಾದಿಯು ವಾದಿಯೊಡನೆ ತಾನು ಮಾಡಿಕೊಂಡಿದ್ದೇನೆಂದು ಹೇಳುವ ಪಂಚಾಯತ್ ಪಾರಿಕತ್ ಮತ್ತು ಕ್ರಯಪತ್ರವನ್ನು ಸಾಬೀತುಗೊಳಿಸಲು ಸಂಪೂರ್ಣವಾಗಿ ವಿಫಲನಾಗಿರುವ ಕಾರಣ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿ ಮತ್ತು 1 , 2 ಹಾಗೂ 5 ರಿಂದ 8ನೇ ಪ್ರತಿವಾದಿಗಳಿಗೆ ಸಮನಾದ ಭಾಗಾಂಶದ ಹಕ್ಕುಗಳು ಇರುತ್ತವೆ . ಆದುದರಿಂದ 3 ಮತ್ತು 4ನೇ ಪ್ರತಿವಾದಿಗಳು ಹೇಳುವಂತೆ 1ನೇ ಪ್ರತಿವಾದಿಯು ಕ್ರಯಪತ್ರದ ಮೂಲಕ ವಾದಿಯಿಂದ ಸ್ವತ್ತುಗಳನ್ನು ಖರೀದಿಸಿದ್ದು , ಆ ಮೂಲಕ 1ನೇ ಪ್ರತಿವಾದಿಯು ತನ್ನ ಆರ್ಥಿಕ ಅವಶ್ಯಕತೆಗಾಗಿ ಮಾರಾಟ ಮಾಡಲು ಇಚ್ಛಿಸಿದ್ದ ದಾವಾ ಷೆಡ್ಯೂಲ್ 11 ಮತ್ತು 19ನೇ ಸ್ವತ್ತುಗಳನ್ನು ತಾವು ಕಾನೂನುಬದ್ಧವಾಗಿ ಖರೀದಿಸಿರುವುದನ್ನು ಸಾಬೀತುಗೊಳಿಸಲು ವಿಫಲರಾಗಿರುವ ಕಾರಣ ಈ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ .

**23. <u>ದಿನಾಂಕ 22.01.2014 ರಂದು ರಚಿಸಿರುವ 1ನೇ ಹೆಚ್ಚುವರಿ ವಿವಾದಾಂಶ :</u>**

**1ನೇ ಪ್ರತಿವಾದಿಯು ತಮ್ಮ ಪ್ರತಿವಾದಪತ್ರದಲ್ಲಿ ವಾದಿಯು ದಾವಾ ಷೆಡ್ಯೂಲ್‌ನಲ್ಲಿ ಉದ್ದೇಶಪೂರ್ವಕವಾಗಿ 1ನೇ ಪ್ರತಿವಾದಿಗೆ ಪಂಚಾಯ್ತಿ ಪಾರಿಕತ್ ಮೂಲಕ ನೀಡಿರುವ ಮನೆ ಪಾಳು ಹಾಳು ಎಂಬುದಾಗಿ ನಮೂದಿಸಿರುವ ಸ್ವತ್ತನ್ನು 1ನೇ ಪ್ರತಿವಾದಿಯ ಹೆಸರಿನಲ್ಲಿ ತಾನೇ ಮಾರಾಟ ಮಾಡಿದ್ದು ಅದನ್ನು ದಾವೆಯಲ್ಲಿ ಸೇರಿಸಿರುವುದಿಲ್ಲವೆಂದು ನಮೂದಿಸಿದ್ದು , ಸದರಿ ವಿಚಾರದ ಬಾಬ್ತು ವಾದಿಯ ಪರ ವಕೀಲರು 1ನೇ ಪ್ರತಿವಾದಿಯನ್ನು ಪಾಟೀ ಸವಾಲಿಗೆ ಒಳಪಡಿಸಿದ್ದು , ಸದರಿ ಪಾಟೀ ಸವಾಲಿನಲ್ಲಿ 1ನೇ ಪ್ರತಿವಾದಿಯು ನಿವೇಶನ ಸಂಖ್ಯೆ 50/ 4 ರ ವಿಸ್ತೀರ್ಣ ತಿಳಿದಿಲ್ಲವೆಂದು , ಸದರಿ ಸ್ಥಳ ಕಸ ಮತ್ತು ಗೊಬ್ಬರವನ್ನು ಹಾಕುವ ಚಿಕ್ಕ ಸ್ಥಳ ಎಂಬುದಾಗಿ ತಿಳಿಸಿದ್ದಾರೆ . ಡಿ.ಡಬ್ಲ್ಯೂ 1 ರವರು ತಮ್ಮ ಪಾಟೀ ಸವಾಲಿನಲ್ಲಿ ನಿಪಿ 20 ಮತ್ತು 22 ದಾಖಲೆಗಳಿಗೆ ರಲ್ಲಿ ವೆಂಕಟಗೌಡ ಬಿನ್ ಕಂಬೇಗೌಡ ಅಂಕನಹಳ್ಳಿ ಎಂಬುವವರು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂಬುದನ್ನು ಒಪ್ಪಿದ್ದಾರೆ ಹಾಗೂ ಅವರು ತಮ್ಮ ಗ್ರಾಮದವರೇ ಅಗಿದ್ದಾರೆಂದು ತಿಳಿಸಿದ್ದಾರೆ. ಮುಂದುವರೆದು ನಿಡಿ 26 ಅಂದರೆ ಈ ವಿವಾದಾಂಶದ ಬಾಬ್ತು ತಿಳಿಸಿರುವ ಮನೆ ಪಾಳು ಎಂಬುದಾಗಿ ನಿಡಿ 26 ರಲ್ಲಿ ತಿಳಿಸಿರುವ ಸ್ವತ್ತನ್ನು ಕಂಬೇಗೌಡ ರ ಮಗ ವೆಂಕಟೇಗೌಡ ಎಂಬುವವರು ಚೌಡೇಗೌಡನಿಗೆ ಬರೆದುಕೊಟ್ಟ ಕ್ರಯಪತ್ರ ಎಂಬುದನ್ನೂ ಸಹಾ 1ನೇ ಪ್ರತಿವಾದಿ ಒಪ್ಪಿದ್ದಾರೆ . ಅಲ್ಲದೆ ಸದರಿ ಸ್ವತ್ತಿಗೆ ಸಂಬಂಧಿಸಿ ಯಾವುದೇ ದಾಖಲೆಗಳಿಲ್ಲವೆಂದು ಮತ್ತು ನಿಷ್ಪ್ರಯೋಜಕ ಜಾಗವೆಂದು ತಿಳಿಸಿದ್ದಾರೆ . 1ನೇ ಪ್ರತಿವಾದಿಯು ಮನೆ ಪಾಳು ಹಾಳು ಎಂಬ ಸ್ವತ್ತಿಗೆ ಸಂಬಂಧಿಸಿದಂತೆ ನಿಡಿ 1 ರಲ್ಲಿ ವಿವರಗಳನ್ನು ನಮೂದಿಸಿದ್ದು ಅದರ ಬಾಬ್ತು ಅಸೆಸ್‌ಮೆಂಟ್ ಸಂಖ್ಯೆಯನ್ನಾಗಲಿ ಅಥವಾ ಅದರ ವಿಸ್ತೀರ್ಣವನ್ನಾಗಲಿ ನಮೂದಿಸಿರುವುದಿಲ್ಲ . ಕೇವಲ ಮನೆ ಪಾಳು ಹಾಳು ಎಂಬುದಾಗಿ ಮಾತ್ರ ನಮೂದಿಸಲಾಗಿದೆ , ಹಾಗೂ ಸದರಿ ಸ್ವತ್ತನ್ನು ವಾದಿಯು ತನ್ನ ಹೆಸರಿನಲ್ಲಿ ಚೌಡೇಗೌಡ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದು ತನ್ನ ಪ್ರತಿವಾದಪತ್ರದಲ್ಲಿ ತಿಳಿಸಿದ್ದು , ತನ್ನ ಪಾಟೀ ಸವಾಲಿನಲ್ಲಿ ಕಂಬೇಗೌಡರ ಮಗ ವೆಂಕಟೇಗೌಡ ಎಂಬುವವರು ಚೌಡೇಗೌಡ ಎಂಬುವವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂಬುದನ್ನು ಒಪ್ಪಿದ್ದಾರೆ , ಹಾಗೂ ಆ ಮೂಲಕ ತಾನು ತನ್ನ ಪ್ರತಿವಾದಪತ್ರದಲ್ಲಿ ವಾದಿಯ ವಿರುದ್ಧ ತನ್ನ ಸಹಿಯನ್ನು ನಕಲು ಮಾಡಿ ವಾದಿಯು ಚೌಡೇಗೌಡರಿಗೆ ಮಾರಾಟ ಮಾಡಿದ್ದಾರೆ ಎಂಬುದನ್ನು ಸೃಷ್ಟಿಸಿ ನಮೂದಿಸಿದ್ದಾರೆ ಎಂಬುದನ್ನು ಸಾಬೀತುಪಡಿಸಿದ್ದಾರೆ . ಪ್ರಸ್ತುತ ದಾವೆಯಲ್ಲಿ ವಾದಿಯು ತಮ್ಮ ಪಿತ್ರಾರ್ಜಿತ ಸ್ವತ್ತುಗಳನ್ನು ವಾದಪತ್ರದ ಷೆಡ್ಯೂಲ್‌ನಲ್ಲಿ ನಮೂದಿಸಿದ್ದು ಆ ಮೂಲಕ ತನಗೆ ಎಲ್ಲಾ ಸ್ವತ್ತುಗಳಲ್ಲಿ ಭಾಗಾಂಶದ ಹಕ್ಕು ಇರುತ್ತದೆ ಎಂಬುದನ್ನು**

ಸಾಬೀತಗೊಳಿಸಿದ್ದಾರೆ ಆದುದರಿಂದ ಈ ದಾವೆಯು ಯಾವುದೇ ಒಂದು ಸ್ವತ್ತನ್ನು ಷೆಡ್ಯೂಲ್‌ನಲ್ಲಿ ನಮೂದಿಸದೆ ಇರುವ ಕಾರಣ ವಜಾಗೊಳ್ಳಲು ಅರ್ಹವಾದ ದಾವೆಯಾಗಿರುವುದಿಲ್ಲ ಅದೇ ಕಾರಣದಿಂದ ಈ ಅಂಶಕ್ಕೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

೨೪. ೨ , ೩ ಮತ್ತು ೫ನೇ ವಿವಾದಾಂಶಗಳು : ಈ ಅಂಶಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ , ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎರಡು ಅಂಶಗಳನ್ನು ಒಟ್ಟಾಗಿ ತೆಗೆದುಕೊಳ್ಳಲಾಗಿದೆ .

ಪ್ರಸ್ತುತ ದಾವೆಯಲ್ಲಿ ವಾದಿಯು ತನ್ನ ವಾದಪತ್ರದಲ್ಲಿ ತಿಳಿಸಿರುವ ಎಲ್ಲಾ ವಿವರಗಳನ್ನು ಹಾಗೂ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ತನ್ನ ಹಕ್ಕನ್ನು ಸಾಕ್ಷ್ಯಾಧಾರಗಳ ಸಹಿತ ಸಾಬೀತುಪಡಿಸಿದ್ದಾರೆ . ವಾದಿಯು ದಾವಾ ಷೆಡ್ಯೂಲ್ ಸ್ವತ್ತುಗಳು ತನ್ನ ಹಾಗೂ ೧ , ೨ ಹಾಗೂ ೫ ರಿಂದ ೮ನೇ ಪ್ರತಿವಾದಿಗಳ ಪಿತ್ರಾರ್ಜಿತ ಸ್ವತ್ತುಗಳೆಂದು , ತಾವುಗಳು ಇಂದಿಗೂ ಸಹಾ ಸದರಿ ಸ್ವತ್ತುಗಳಲ್ಲಿ ನಿಹಿತವಾದ ಭಾಗಾಂಶದ ಹಕ್ಕನ್ನು ಹೊಂದಿದ್ದು ಒಟ್ಟು ಕುಟುಂಬದ ಸದಸ್ಯರಾಗಿಯೇ ಮುಂದುವರೆದುಕೊಂಡು ಬರುತ್ತಿರುವುದಾಗಿ ತಿಳಿಸಿದ್ದು ಅದನ್ನೂ ಸಹಾ ತಮ್ಮ ಸಾಕ್ಷ್ಯಾಧಾರಗಳಿಂದ ಸಾಬೀತುಪಡಿಸಿದ್ದಾರೆ . ೧ನೇ ಪ್ರತಿವಾದಿಯು ಪಂಚಾಯ್ತಿ ಪಾಲು ಪಾರಿಕತ್ ಮತ್ತು ಕ್ರಯಪತ್ರವನ್ನು ಹಾಜರುಪಡಿಸಿದ್ದು ಅವುಗಳಿಗೆ ಸಂಬಂಧಿಸಿ ಸಾಕ್ಷೀದಾರರನ್ನು ವಿಚಾರಣೆಗೆ ಒಳಪಡಿಸಿದ್ದಾರೆ . ಆದರೆ ಅವರು ವಿಚಾರಣೆಗೆ ಒಳಪಡಿಸಿರುವ ಸಾಕ್ಷೀದಾರರು ೧ನೇ ಪ್ರತಿವಾದಿಯ ಪ್ರತಿವಾದ ಪತ್ರದ ವಿವರಗಳಿಗೆ ಪೂರಕವಾಗಿ ಸಾಕ್ಷಿ ವಿಚಾರಣೆ ನೀಡುವಲ್ಲಿ ವಿಫಲರಾಗಿದ್ದಾರೆ . ೧ನೇ ಪ್ರತಿವಾದಿಯು ತನ್ನ ಹಾಗೂ ವಾದಿಯ ಪಿತ್ರಾರ್ಜಿತ ಸ್ವತ್ತುಗಳು ತಮ್ಮ ನಡುವೆ ಪಂಚಾಯತ್ ಪಾಲುಪಾರಿಕತ್‌ನ ಮೂಲಕ ವಿಭಾಗವಾಗಿದ್ದು ಹಾಗೂ ಆ ಮೂಲಕ ವಾದಿಯು ತನ್ನ ಭಾಗಾಂಶದ ಸ್ವತ್ತುಗಳಲ್ಲಿ ಕೆಲವು ಸ್ವತ್ತುಗಳನ್ನು ತನಗೆ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ . ಆದುದರಿಂದ ವಾದಿಯು ದಾವೆಯಲ್ಲಿ ಕೋರಿರುವಂತೆ ೧ / ೪ ಭಾಗಾಂಶವನ್ನು ಪಡೆಯಲು ಹಕ್ಕುಳ್ಳವರಾಗಿರುವುದಿಲ್ಲ ಎಂದು ತಿಳಿಸಿದ್ದು , ವಾದಿಯ ದಾವೆಯನ್ನು ಅಲ್ಲಗಳೆಯಲು ಬೇಕಾದ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ಒದಗಿಸಿ ವಾದಿಯ ದಾವೆಯನ್ನು ಅಲ್ಲಗಳೆಯಲು ಪ್ರತಿವಾದಿಗಳು ವಿಫಲರಾಗಿರುವ ಕಾರಣ ಹಾಗೂ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಯು ತನ್ನ ನಿಹಿತವಾದ ೧ / ೪ ಭಾಗಾಂಶದ ಹಕ್ಕನ್ನು ಪಡೆಯಲು ಹಕ್ಕುಳ್ಳವರಾಗಿರುವ ಕಾರಣ

ದಾವೆ ಸಲ್ಲಿಸಿದ ದಿನಾಂಕದಿಂದಲೂ ಅವರಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ನಿಹಿತವಾದ ೧ / ೪ ಭಾಗಾಂಶ ಮತ್ತು ಅದರ ಪ್ರತ್ಯೇಕ ಸ್ವಾಧೀನ ಸಿಗುವವರೆಗೂ ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲಿನ ಮಧ್ಯಕಾಲಿನ ಲಾಂಭಾಂಶಗಳನ್ನು ಪಡೆಯಲು ಅವರು ಅರ್ಹರಿರುತ್ತಾರೆ .

೨೫. ಪ್ರಸ್ತುತ ದಾವೆಯಲ್ಲಿ ೫ ರಿಂದ ೮ನೇ ಪ್ರತಿವಾದಿಗಳು ತಮ್ಮ ತಾಯಿ ಮಾಯಮ್ಮರವರ ಮೂಲಕ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಹಕ್ಕುಗಳನ್ನು ಪಡೆದುಕೊಂಡಿದ್ದಾರೆ . ೧ನೇ ಪ್ರತಿವಾದಿಯು ಪಂಚಾಯ್ತಿ ಪಾಲು ಪಾರಿಕತ್ ಮತ್ತು ಕ್ರಯಪತ್ರವನ್ನು ಸಾಬೀತುಗೊಳಿಸಲು ವಿಫಲರಾಗಿರುವ ಕಾರಣ ಅವರೂ ಸೇರಿದಂತೆ ವಾದಿ , ೨ನೇ ಪ್ರತಿವಾದಿ ಹಾಗೂ ೫ ರಿಂದ ೮ನೇ ಪ್ರತಿವಾದಿಗಳ ತಾಯಿ ಸಹಾ ಸಮಾನವಾದ ಭಾಗಾಂಶವನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ ಅಂದರೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿ ಮತ್ತು ೧ನೇ ಪ್ರತಿವಾದಿ ಸಹೋದರರಾಗಿದ್ದು ೨ ಮತ್ತು ೫ ರಿಂದ ೮ನೇ ಪ್ರತಿವಾದಿಗಳ ತಾಯಿ ಮಾಯಮ್ಮವರು ವಾದಿ ಮತ್ತು ೧ನೇ ಪ್ರತಿವಾದಿಯ ಸಹೋದರಿಯರಾಗಿದ್ದು ಅವರು ಸಹಾ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ೧ / ೪ ಭಾಗಾಂಶವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ . ಪ್ರಸ್ತುತ ಮಾಯಮ್ಮನವರು ಮರಣ ಹೊಂದಿರುವ ಕಾರಣ ಅವರ ಭಾಗಾಂಶದ ೧ / ೪ ಭಾಗಾಂಶದ ಸ್ವತ್ತಿನಲ್ಲಿ ೫ ರಿಂದ ೮ನೇ ಪ್ರತಿವಾದಿಗಳು ಸಮಾನವಾದ ಭಾಗಾಂಶವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ . ಆದುದರಿಂದ ೫ ರಿಂದ ೮ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಗೊಂಚಲಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ೧ / ೪ ಭಾಗಾಂಶವನ್ನು ನೀಡಬೇಕಾಗುತ್ತದೆ . ಪ್ರಸ್ತುತ ದಾವೆಯಲ್ಲಿ ೫ ರಿಂದ ೮ನೇ ಪ್ರತಿವಾದಿಗಳು ತಮ್ಮ ಪ್ರತಿವಾದಪತ್ರವನ್ನು ಸಲ್ಲಿಸಿ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಗೆ ಸಿಗುವಂತೆ ತಮಗೂ ಸಹಾ ತಮ್ಮ ತಾಯಿಗೆ ಸಲ್ಲಬೇಕಾದ ೧ / ೪ ಭಾಗಾಂಶ ಸಲ್ಲಬೇಕೆಂದು ಹಾಗೂ ಆ ಪ್ರಕಾರ ಡಿಕ್ರಿ ಮಾಡಿಕೊಡಬೇಕೆಂದು ಕೋರಿದ್ದಾರೆ . ಅದರಂತೆ ವಾದಿಯು ತಮ್ಮ ದಾವೆಯನ್ನು ಸಾಬೀತುಪಡಿಸಿರುವ ಕಾರಣ ಹಾಗೂ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ತಮ್ಮ ನಿಹಿತವಾದ ೧ / ೪ ಭಾಗಾಂಶವನ್ನು ಪಡೆಯಲು ಹಕ್ಕುಳ್ಳವರಾಗಿರುವ ಕಾರಣ ಈ ಮೇಲಿನ ಮೂರೂ ಅಂಶಗಳಿಗೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ .

೨೬. ೬ನೇ ವಿವಾದಾಂಶ : ಮೇಲಿನ ವಿವಾದಾಂಶಗಳಿಗೆ ಚರ್ಚಿಸಿರುವ ಚರ್ಚೆಯ ಆಧಾರದಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ .

**: ಆದೇಶ :**

ವಾದಿಯ ದಾವೆಯನ್ನು ಡಿಕ್ರಿ ಮಾಡಲಾಗಿದೆ .

ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಯು ೧ / ೪ ಭಾಗಾಂಶವನ್ನು ಮತ್ತು ಅದರ ಪ್ರತ್ಯೇಕ ಸ್ವಾಧೀನವನ್ನು ಹೊಂದಲು ಹಕ್ಕುಳ್ಳವರಾಗಿರುತ್ತಾರೆ .

೫ ರಿಂದ ೮ನೇ ಪ್ರತಿವಾದಿಗಳು ಅಂತಿಮ ಡಿಕ್ರಿಯ ಸಮಯದಲ್ಲಿ ತಮ್ಮ ಸ್ವತ್ತುಗಳ ಭಾಗಾಂಶದ ಬಾಬ್ತು ನ್ಯಾಯಾಲಯದ ಶುಲ್ಕವನ್ನು ಪಾವತಿಸಿ ತಮ್ಮ ತಾಯಿಗೆ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಸಲ್ಲಬೇಕಾದ ೧ / ೪ ಭಾಗಾಂಶವನ್ನು ಮತ್ತು ಅದರ ಪ್ರತ್ಯೇಕ ಸ್ವಾಧೀನವನ್ನು ಹೊಂದಲು ಹಕ್ಕುಳ್ಳವರಾಗಿರುತ್ತಾರೆ .

೧ನೇ ಪ್ರತಿವಾದಿಯು ದಿನಾಂಕ ೦೬.೧೧.೧೯೯೧ ರಂದು ೩ನೇ ಪ್ರತಿವಾದಿಗೆ ಹಾಗೂ ದಿನಾಂಕ ೧೮.೦೮.೧೯೯೪ ರಂದು , ೪ನೇ ಪ್ರತಿವಾದಿಗೆ ಕ್ರಮವಾಗಿ ದಾವಾ ಷೆಡ್ಯೂಲ್ ೧೧ ಮತ್ತು ೧೯ನೇ ಸ್ವತ್ತುಗಳ ಬಾಬ್ತು ಮಾಡಿಕೊಟ್ಟಿರುವ ಕ್ರಯಪತ್ರಗಳು ವಾದಿಯನ್ನು ಬದ್ಧಗೊಳಿಸುವುದಿಲ್ಲವೆಂದು ಘೋಷಿಸಲಾಗಿದೆ .

ದಾವಾ ಷೆಡ್ಯೂಲ್ ಸ್ವತ್ತುಗಳ ಮೇಲೆ ಮಧ್ಯಕಾಲೀನ ಲಾಭಾಂಶಗಳನ್ನು ಅಂತಿಮ ಡಿಕ್ರಿ ಬರೆಯುವ ಸಮಯ ಪರಿಗಣಿಸತಕ್ಕದ್ದು.

ದಾವೆಯ ಸ್ವರೂಪ ಮತ್ತು ಪಕ್ಷಕಾರರುಗಳ ಸಂಬಂಧಗಳ ಆಧಾರದಲ್ಲಿ ದಾವೆಯ ಬಾಬ್ತು ವೆಚ್ಚಕ್ಕಾಗಿ ಯಾವುದೇ ಆದೇಶವಿಲ್ಲ . ಪಕ್ಷಕಾರರು ಅವರವರ ವೆಚ್ಚಗಳನ್ನು ಅವರೇ ಭರಿಸತಕ್ಕದ್ದು .

ಅದೇ ಪ್ರಕಾರ ಪ್ರಾಥಮಿಕ ಡಿಕ್ರಿ ಬರೆಯಲು ಆದೇಶಿಸಲಾಗಿದೆ .

[ ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ತಪ್ಪುಗಳನ್ನು ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ ೨೦ನೇ ಡಿಸೆಂಬರ್ ೨೦೧೪ ರಂದು ಉಚ್ಚರಿಸಲಾಯಿತು. ]

( ಅನುಪಮ.ಡಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ನಾಗಮಂಗಲ.

## ಃ ಅನುಬಂಧ ಃ

**ವಾದಿಗಳ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ**

| | | | |
|---|---|---|---|
| ಪಿಡಬ್ಲ್ಯೂ ೧ | ಃ | ಕಂಬೇಗೌಡ | ದಿನಾಂಕ ೨೯.೦೫.೨೦೦೯ |

**ವಾದಿಗಳ ಪರ ದಾಖಲು ಮಾಡಿದ ದಾಖಲೆಗಳು**

| | | |
|---|---|---|
| ನಿಶಾನೆಪಿಃ ೧ ರಿಂದ ೭ | ಃ | ಪಹಣಿ ಪತ್ರಿಕೆಗಳು |
| ನಿಶಾನೆಪಿಃ ೧೮ | ಃ | ದೃಢೀಕೃತ ಡಿಮ್ಯಾಂಡ್ ರಿಜಿಸ್ಟರ್ |
| ನಿಶಾನೆಪಿಃ ೧೯ | ಃ | ಅಲಭ್ಯ ಪ್ರಮಾಣಪತ್ರ |
| ನಿಶಾನೆಪಿಃ ೨೦ | ಃ | ಪೌತಿ ಖಾತೆಯ ಪ್ರತಿ |
| ನಿಶಾನೆಪಿಃ ೨೧ | ಃ | ಕ್ರಯಪತ್ರ |
| ನಿಶಾನೆಪಿಃ ೨೨ | ಃ | ಕ್ರಯಪತ್ರ |

**ಪ್ರತಿವಾದಿಗಳ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ**

| | | | |
|---|---|---|---|
| ಡಿಡಬ್ಲ್ಯೂ ೧ | ಃ | ವೆಂಕಟೇಗೌಡ | ದಿನಾಂಕ ೨೧.೦೯.೨೦೧೩ |
| ಡಿಡಬ್ಲ್ಯೂ ೨ | ಃ | ಎ.ಟಿ.ನಾಗರಾಜು | ದಿನಾಂಕ ೨೮.೧೧.೨೦೧೩ |
| ಡಿಡಬ್ಲ್ಯೂ ೩ | ಃ | ವಿ.ಶ್ರೀನಿವಾಸಗೌಡ | ದಿನಾಂಕ ೨೮.೧೧.೨೦೧೩ |
| ಡಿಡಬ್ಲ್ಯೂ ೪ | ಃ | ವೆಂಕಟರಾಮೇಗೌಡ | ದಿನಾಂಕ ೧೯.೧೨.೨೦೧೩ |
| ಡಿಡಬ್ಲ್ಯೂ ೫ | ಃ | ವೆಂಕಟರಾಮೇಗೌಡ | ದಿನಾಂಕ ೧೯.೧೨.೨೦೧೩ |
| ಡಿಡಬ್ಲ್ಯೂ ೬ | ಃ | ಗಂಗಪ್ಪ | ದಿನಾಂಕ ೧೯.೧೨.೨೦೧೩ |
| ಡಿಡಬ್ಲ್ಯೂ ೭ | ಃ | ಬೆಟ್ಟಸ್ವಾಮಿಗೌಡ | ದಿನಾಂಕ ೦೪.೦೪.೨೦೧೪ |

**ಪ್ರತಿವಾದಿಗಳ ಪರವಾಗಿ ದಾಖಲು ಮಾಡಿದ ದಾಖಲಾತಿಗಳ ಪಟ್ಟಿಃ**

| | | |
|---|---|---|
| ನಿಶಾನೆಡಿಃ ೧ | ಃ | ಪಂಚಾಯ್ತಿ ಪಾರಿಕತ್ತು |
| ನಿಶಾನೆಡಿಃ ೧(ಎ) | ಃ | ಡಿಡಬ್ಲ್ಯೂ ೨ ರವರ ತಂದೆಯ ಸಹಿ |
| ನಿಶಾನೆಡಿಃ ೧(ಬಿ) | ಃ | ಡಿಡಬ್ಲ್ಯೂ ೭ ರವರ ತಂದೆಯ ಸಹಿ |
| ನಿಶಾನೆಡಿಃ ೨ | ಃ | ಕ್ರಯಪತ್ರ |
| ನಿಶಾನೆಡಿಃ ೨(ಎ) | ಃ | ಡಿಡಬ್ಲ್ಯೂ ೨ ರವರ ತಂದೆಯ ಸಹಿ |
| ನಿಶಾನೆಡಿಃ ೨(ಬಿ) | ಃ | ಡಿಡಬ್ಲ್ಯೂ ೩ ರವರ ತಂದೆಯ ಸಹಿ |
| ನಿಶಾನೆಡಿಃ ೨(ಸಿ) | ಃ | ಡಿಡಬ್ಲ್ಯೂ ೬ ರವರ ಸಹಿ |
| ನಿಶಾನೆಡಿಃ ೩ ರಿಂದ ೧೬ | ಃ | ಪಹಣಿ ಪತ್ರಿಕೆಗಳು |
| ನಿಶಾನೆಡಿಃ ೧೭ | ಃ | ಗ್ರಾಮ ಲೆಕ್ಕಾಧಿಕಾರಿಗಳ ವರದಿ |

| | | |
|---|---|---|
| ನಿಶಾನೆಡಿಃ ೧೮ | ಃ | ಪಹಣಿ ಪತ್ರಿಕೆ |
| ನಿಶಾನೆಡಿಃ ೧೯ | ಃ | ಮ್ಯುಟೇಷನ್ |
| ನಿಶಾನೆಡಿಃ ೨೦ | ಃ | ನೋಂದಾಯಿತ ಅಸಲು ಕ್ರಯಪತ್ರ |
| ನಿಶಾನೆಡಿಃ ೨೧ | ಃ | ಪಹಣಿ ಪತ್ರಿಕೆ |
| ನಿಶಾನೆಡಿಃ ೨೨ | ಃ | ನೋಂದಾಯಿತ ಅಸಲು ಕ್ರಯಪತ್ರ |
| ನಿಶಾನೆಡಿಃ ೨೩ | ಃ | ಡಿಮ್ಯಾಂಡ್ ರಿಜಿಸ್ಟರ್ |
| ನಿಶಾನೆಡಿಃ ೨೪ | ಃ | ಪಹಣಿ ಪತ್ರಿಕೆ |
| ನಿಶಾನೆಡಿಃ ೨೫ | ಃ | ಅಸೆಸ್‌ಮೆಂಟ್ |
| ನಿಶಾನೆಡಿಃ ೨೬ | ಃ | ಕ್ರಯಪತ್ರದ ದೃಢೀಕೃತ ನಕಲು |
| ನಿಶಾನೆಡಿಃ ೨೭ | ಃ | ಡಿಮ್ಯಾಂಡ್ ರಿಜಿಸ್ಟರ್‌ನ ದೃಢೀಕೃತ ನಕಲು |

ಸಿವಿಲ್ ನ್ಯಾಯಾಧೀಶರು,
ನಾಗಮಂಗಲ.

**ವಾದ ಮತ್ತು ಪ್ರತಿವಾದ ಪತ್ರಗಳ ಆಧಾರದಲ್ಲಿ ಈ ಕೆಳಕಂಡ ವಿವಾದಾಂಶಗಳನ್ನು ರಚಿಸಲಾಗಿದೆ.**

**.....................**